ಬೆರೆಸಿದ್ದ। ನಾನಾಪರಿಯಪಕ್ವಾನ್ನ ಘೃತದಿಂದಸಹಿತಾಗಿಯಿಂದಾ।। ಸರಸಿನೈವೇದ್ಯವ ಸಮರ್ಪಿಸಿ। ಹರುಷ ದಿಂದ್ವೊರಗಳನೆ ಕೊಡುವ್ಹೋ ಸರಸಿ। ತಿರುಪತಿಯ ವೆಂಕಟನರಸಿ ಲಕ್ಷ್ಮೀ ಸರಸಿಜಾಕ್ಷಿಗೇ।।4।।

ಮಂಗಳಂ ವೀರಲಕ್ಷ್ಮಿ ಮಂಗಳಂ **ರಾಗ:ರಂಜನಿ**

ಮಂಗಳಂ ವೀರಲಕ್ಷ್ಮಿ ಮಂಗಳಂ। ವಿಜಯಲಕ್ಷ್ಮಿ ಮಂಗಳಂ।। ವಿಶ್ವಜನನಿ ಮಂಗಳಂ। ಲಕ್ಷ್ಮೀದೇವಿ ಮಂಗಳಂ ।।ಪ।। ಸಿಂಧಾರಾಜ ನಂದನೇ। ಸಾಕ್ಷಿನಿದನಿ ರಂಜನೇ। ಶಕ್ತಿ ಸುಗುಣ ಭಂಜನೇ। ಭಕ್ತಜನಾರ್ತಿ ರಂಜನೇ।।1।। ಆದಿ ಮೂಲ ಕಾರಿಣಿ। ಅಮೃತ ಕಲಶ ಧಾರಿಣಿ। ಆನಂದ ಪೂರಿನಿ। ಅಮ್ರವಿಶ್ವ ನೋದಿನಿ।।2।। ಶಂಖುಚಕ್ರ ಶೋಭಿತೆ। ಸುವರ್ಣ ಭರಣ ಭೂಷಿತೇ। ಶಾಂತಿಸುಖಲಾಲಿತೇ। ಸನಕಾದಿ ಮುನಿನುತೆ।।3।। ಪಾಲತಿಲಕ ಶೋಭಿತೆ। ಪದ್ಮ ಕರವಿ ರಾಜಿತೇ। ಪಾಲಿಸೇ ಫಲಪ್ರದಾತೇ। ಪದ್ಮ ಸಂಭವನಮಾತೆ।।4।।

ಮಂಗಳಂ ಶ್ರೀ ರಂಗನಾಯಕೀ **ರಾಗ: ಸುರಟಿ**

ಮಂಗಳಂ ಶ್ರೀ ರಂಗನಾಯಕೀ। ಭಾಗ್ಯಲಕ್ಷ್ಮಿ ಮಂಗಳಂ। ಶ್ರೀ ಮೋಕ್ಷದಾಯಕಿ ಮಂಗಳಂ। ಶ್ರೀ ಮಹಾನುಭಾವೆ ಅರಸಿ ಲಕ್ಷ್ಮಿ ಲೋಕಮಾತೆ ನಂಬಿದೇ ಎನ್ನಸೌ। ಮಾಂಗಲ್ಯತನವ ಪಾಲಿಸೆ।।ಪ।। ಕ್ಷೀರಸಾಗರನ ಬಣ್ಣಿಸಿ। ನಿನ್ನ ಭಜಿಪೆ ಎನ್ನ ಸಲಹೆ ಮೋಕ್ಷದಾಯಕಿ। ಮೂರುಲೋಕಲ್ಲಿಕಾಣೆ ತಾಯೆ ಸೊಬಗ ನಾನು। ಬೇಡಿದವರಿಗ್ವರವಕೊಡುವ್ಹೊ। ಭಕ್ತ ಪ್ರದಾಯಕಿಗೆ।।1।। ಜರಿಯುನೀ ರಾಜಸೀರೆಯು। ಉಡಿಸಿ ಕೈಗೆ ತೊಡಿಸಿ ದಾಭರಣರವಿಕೆಯ। ನಡುವಿನೊಡ್ಯಾಣ ವಂಕಿ। ಬುಗುಡಿ ಬಾವುಲಿಗಳ। ಧರಿಸಿ ಕೊರಳೊಳ್। ಸರ ಕಂಠಮಾಲೆ ಪದತಲತಲಿಪಳೂ।।2।। ಚಂದ್ರ ಸೂರ್ಯರ ಜರಿಯುವೋ ಮುಖಕೆ ದಿವ್ಯ ಚಂದ್ರದಾಕಾರ ತಿಲಕವಾ। ಶ್ರೀರಂಗನಾಥ ಅಂಗನೇಗೆ ಚಂದದಾಭರಣ ಧರಿಸಿ। ನಂಬಿದವರಿಗೆ ವರವ ಕೊಡುವ। ಶ್ರೀರಂಗನಾಥನಂಗನೇಗೆ।।3।।

ದೇವಿ ಸ್ತುತಿ

ದೇವರನಾಮ

ಉಮಾ ಕಾತ್ಯಾಯಿನಿ ಗೌರಿ **ರಾಗ:ಆನಂದಭೈರವಿ**

ಉಮಾ ಕಾತ್ಯಾಯಿನಿ ಗೌರಿ। ದಾಕ್ಷಾಯಿಣಿ ಹಿಮವಂತ ಗಿರಿಯ ಕುಮಾರಿ.......।।ಪ।। ರಮೆಯರಸನ ಪದಕಮಲ ಮಧುಪೆ ನಿತ್ಯ ಅಮರವಂದಿತೆ ಗಜಗಮನೆ ಭವಾನಿ।।ಅ.ಪ।। ಪನ್ನಗಧರನ ರಾಣಿ ಪರಮ ಪಾವನಿ। ಪುಣ್ಯಫಲ ಪ್ರದಾಯಿನಿ। ಪನ್ನಂಗವೇಣಿ ಶರ್ವಾಣಿ। ಕೋಕಿಲ ವಾಣಿ। ಉನ್ನತ ಗುಣಗಣಶ್ರೇಣೀ। ಎನ್ನಮನದ ಅಭಿಮಾನಿ ದೇವತೆಯೆ ಸ್ವರ್ಣಗಿರಿಸಂಪನ್ನೆ ಭಾಗ್ಯನಿಧಿ। ನಿನ್ನ ಮಹಿಮೆಯನು ಬಿನ್ನಾಣದಲಿ ನಾ ವರ್ಣಿಸಲಳವೆ ಪ್ರಸನ್ನವದನಳೆ।।1।। ಮುತ್ತಿನ ಪದಕಹಾರ। ಮೋಹನ್ನಸರ। ಉತ್ತುಂಮಾಂಗದ ಅಲಂಕಾರ। ಜತ್ಯಾಗಿ ಇಟ್ಟ ಪಂಜರದೋಲೆ। ವೈಯ್ಯಾರ ರತ್ನ ಕಂಕಣದ ಉಂಗುರ। ತೆತ್ತಿ ಸಕೋಟಿ ದೇವತೆಗಳು ಪೊಗಳುತಾ ಸತಿಗೆ ಚಾಮರವೆತ್ತಿ ಪಿಡಿಯುತಿರೆ। ಸುತ್ತಲೂ ಆಡುವ ನರ್ತನ ಸಂದಣಿ ಎತ್ತ ನೋಡಿದರತ್ತ ಥೈ ಥೈ ವಾದ್ಯ।।2।। ಪೊಳೆವ ವಸನ ಕಂಚುಕ....ಕಸ್ತೂರಿ ತಿಲಕ। ಥಳಿಪ ಮೂಗುತಿ ನಾಸಿಕ...। ತಳಿತ ಮಲ್ಲಿಗೆ ಗಂಧಿಕ...। ಮುಡಿದ ಸೂಸುತ ಸಲೆ ಭುಜಕೀರ್ತಿ ಪಾಟಿಕವ। ಇಳೆಯೊಳು ಮಧುರಾಪುರದೊಳುವಾಸಳೆ। ಅಳಗಿರಿ ವಿಜಯ ವಿಠಲನ ಕೊಂಡಾಡುವ। ಸುಲಭ ಜನರಿಗೆಲ್ಲಾ ಒಲಿದು ಮತಿಯನೀವೆ ಗಿಳಿಕರಶೋಭಿತೆ ಪರಮ ಮಂಗಳೆ।।3।।

ಕಾಳಿಕಾಂಬ ಜಗಜ್ಜನನಿ **ರಾಗ: ಬೇಹಾಗ್**

ಕಾಳಿಕಾಂಬ ಜಗಜ್ಜನನಿ ಲೋಕಪೂಜ್ಯ ಪಾವನಿ। ಮೋದದಿಂದ ಹರಸುತಾಯೆ ಸುತರಕಾಯೆ ಕಣ್ಮಣಿ।।ಪ।। ಸುರರು

ನರರು ತಪಿಸುತಿರಲು। ಅಸುರಬಾಧೆಯು ಮುಗಿಲು ಮುಟ್ಟಲು। ಜಗದೊಳೆಲ್ಲೆಡೆ ಕ್ರೌರ್ಯಮೂಡಲು ಜಗವ ಪೊರೆಯೆ ಧರೆಗೆ ಬಂದೆ॥1॥ ಮಾರಣ ಹೋಮವ ಮಾಡುತಲಿ ನೀನು। ಅಸುರರ ಶಿರವನು ಕಡಿಯುತ ನೀನು। ಭೀಕರ ರೂಪವ ತಾಳುತ ನೀನು। ದುರುಳ ರಕ್ಕಸರ ಸೊಕ್ಕನು ಮುರಿದೆ॥2॥ ಧರೆಯೊಳು ಶಾಂತಿ ನೆಲಸಿ ಬರಲು। ಭಕುತರೆಲ್ಲರು ಶರಣು ಬರಲು। ಕರುಣೆ ತೋರುತ ಅಭಯ ನೀಡಿದೆ। ಚೈತನ್ಯದಾಸಗೆ ಸಾನಿಧ್ಯ ನೀಡಿದೆ॥3॥

ನಿನ್ನ ಕಂಡು ಧನ್ಯಳಾದೆ **ರಾಗ : ಬಾಗೇಶ್ರೀ, ತ್ರಿಶ್ರ್ಯಏಕತಾಳ**

ನಿನ್ನ ಕಂಡು ಧನ್ಯಳಾದೆ ಶಂಕರಿ। ಬನಶಂಕರಿ ತ್ರಿಪುರ ಸುಂದರಿ॥ಪ॥ ಎನ್ನ ಮನಮಂದಿರದಿ ನಿನ್ನ ರೂಪ ತುಂಬಿರಲಿ। ಘನ್ನಮಹಿಮಳೆ ನಿನ್ನ ಸೇವೆ ಸ್ಥಿರವಾಗಿ ಎನಗಿರಲಿ॥ಅ.ಪ.॥ ನಿರುತ ಭಕುತಿ ನೀಡು ತಾಯೆ। ಅನವರತವು ನುಡಿಸು ತಾಯೆ। ಬೇರಿಲ್ಲೆನ್ನ ಬಯಕೆ ತಾಯೆ। ಬಂದೆನ್ನ ಸಲಹು ತಾಯೆ॥1॥ ಅಭಯ ತೋರುತ ಗಂಭೀರದಿ ನಿಂತಿಹ ಬನಶಂಕರಿ। ಆರ್ತನಾದ ಕೇಳಿ ಜನರ ಪೊರೆಯುವ ಬನಶಂಕರಿ। ಆತ್ಮಾನಂದ ಜ್ಯೋತಿ ರೂಪಿಣಿ ಅಮೃತ ವರ್ಷಿಣಿ ಶಂಕರಿ। ದೇವಿ ಶಾರದ ದಾಸಿ ವಂದಿತೆ ಶಂಕರಿ ಬನಶಂಕರಿ॥2॥

ಪೂಜಿಸಲೆನ್ನಿಂದಲಳವೆ ಶ್ರೀಗೌರಿ **ರಾಗ: ಮಧ್ಯಮಾವತಿ**

ಪೂಜಿಸಲೆನ್ನಿಂದಲಳವೆ॥ ಶ್ರೀ ಗೌರಿ ನಿನ್ನಯ ಚರಣಗಳಾ॥ಪ॥ ನಾನಿನ್ನು ಬಾಲಕಿಯು। ಅರಿಯೆನುನಾನಿನ್ನಯ। ಇರವ ಪಾರ್ವತಿಯೇ ಭಾರತಿಯೇ। ಸಿರಿರಮಣನ ಸೋದರಿಯೆ॥1॥ ಅಪರಾಧಗಳ ಕ್ಷಮಿಸಿ। ಚಪಲವ ಪರಿಹರಿಸಿ। ಭಕ್ತಿಯನೂ ಶಕ್ತಿಯನೂ। ಮುಕ್ತಿಯನೂ ಕರುಣಿಸು ನೀ॥2॥ ಶ್ರೀರಾಮ ವಿಠಲನ್ನಾ। ನಾಮವಜಪಿಸುವಂಥಾ। ಶಂಕರಿ ಸೌಮಾಂಗಲ್ಯ। ಭಾಗ್ಯವನೂ ನೀಡುವುದೂ॥3॥

ಬಾ ಬಾರೆ ಬಾರೆ ತಾಯೀ

ಬಾ ಬಾರೆ ಬಾರೆ ತಾಯೀ। ಬಾ ಬಾರೆ ಬಾರೆ ಮಾಯೀ। ಬಾ ಬಾರೆ ಬಾರೆ ರೇಣುಕೆ॥ಪ॥ ಸಪ್ತಗಿರಿನಿವಾಸೀ। ತಪ್ತಕಾಂಚನ ಸದೃಶೆ। ಕ್ಲಪ್ತಯೋಗಿಣಿವೇಷೆ। ಪ್ರಾಪ್ತಳಾಗೌಸುವಾಸೆ॥1॥ ಜಡೆಮುಡಿ ಜಾಣೆ ಬಾರೇ। ಮಡಿಯುಟ್ಟ ಮಾಣಿ ಬಾರೆ। ನಡುವಿಗೊಡ್ಯಾಣೆ। ಕಡಗದ ಕೈಯತಾರೆ॥2॥ ದುರ್ಗಾಸ್ವರೂಪಿಯಪ। ವರ್ಗದಾಯಿನಿ। ಭಾರ್ಗವರಾಮ ಜನನೀ। ಸ್ವರ್ಗಗೋಪಾಲಿ ನೀ॥3॥ ಜಮದಗ್ನಿ ಕಾಂತೆ ಬಾರೆ। ಅಮಿತಗುಣವಂತೆ ಬಾರೇ। ನಮಿಪೆ ವಿಖ್ಯಾತೆ ಬಾರೆ। ಕಮಲೆ ಪ್ರತಿಭಾಂಕುರನ ತೋರೆ॥4॥

ಶ್ರೀ ಕಾಳಿಕಾಮಾತೆ ದರುಶನವ ನೀಡಮ್ಮ **ರಾಗ: ಸರಸ್ವತಿ**

ಶ್ರೀ ಕಾಳಿಕಾಮಾತೆ ದರುಶನವ ನೀಡಮ್ಮ। ಎನ್ನ ಮನದಿಚ್ಛೆಯನು ಪೂರೈಸು ನೀನಮ್ಮ॥ಪ॥ ನಿನ್ನ ಮುದ್ದುಮುಖ ನೋಡೆ ಹಾತೊರೆವೆ ನಾನಮ್ಮ। ನಿನ್ನ ಮಹಿಮೆಯ ಅರಿಯೆ ತವಕಿಸುವೆನಮ್ಮ। ನಿನ್ನ ಪ್ರೇಮದ ರೂಪ ನೋಡೆ ಬಯಸಿಹೆನಮ್ಮ। ಕರುಣಾಳು ಬಾ ತಾಯೆ ಕರುಣೆಯ ತೋರಮ್ಮ॥1॥ ಬಾಳಲ್ಲಿ ಅನುಗಾಲ ನಿನ್ನ ಭಜಿಸುವೆನಮ್ಮ। ನಿನ್ನ ಚರಿತಾಮೃತವ ನಿತ್ಯ ಪಾಡುವೆನಮ್ಮ। ನಿನ್ನಲೀಲೆಯ ತೋರೆ ಪ್ರೇಮದೃಷ್ಟಿಯ ಬೀರೆ। ಚೈತನ್ಯದಾಸನಿಗೆ ದಿವ್ಯರೂಪವ ತೋರೆ॥2॥

ಭಕ್ತಿಗೀತೆ

ಅಣ್ಣಮ್ಮ ಎಂದರು ನೀನೆ **ರಾಗ: ನಾದನಾಮಕ್ರಿಯೆ, ಏಕತಾಳ**

ಅಣ್ಣಮ್ಮ ಎಂದರು ನೀನೆ। ಎಲ್ಲಮ್ಮ ಎಂದರು ನೀನೆ। ದುರ್ಗಮ್ಮ ಎಂದರು ನೀನೆ ಚಾಮುಂಡಿ॥ಪ॥ ಕಾಳಮ್ಮ ಎಂದರು ನೀನೆ। ಮಾರಮ್ಮ ಎಂದರು ನೀನೆ। ದಯೆ ತೋರಿ ಬಾರಮ್ಮ ಚಾಮುಂಡಿ॥ಅ.ಪ॥ ಶ್ರೀದೇವಿ ಭೂದೇವಿ ವಾಗ್ದೇವಿ ವೈಷ್ಣವಿ। ವಾಸವಿ ವಾರುಣಿ ವರನೀಡೆ ಶಾಂಭವಿ॥1॥ ನಂಬಿ ಬಂದಿಹೆ ತಾಯೆ ಇಂಬುನೀಡಮ್ಮ ನೀಯೆ। ಹಂಬಲವ

ಪೂರೈಸಿ ಹರಸಿ ಎಮ್ಮ ಕಾಯೆ॥2॥ ಕಂಬುಕಂಧರೆ ತಾಯೆ ತುಂಬು ಹೃದಯದ ಮಾಯೆ। ಕಣ್ತುಂಬ ತುಂಬಿಕೊಳ್ಳೆ ಶಾರದೇನುತೆ ಮಾಯೆ॥3॥

ಆದಿ ದಿವ್ಯ ಜ್ಯೋತಿ ಮಹಾಕಾಳೀಮಾ(ಮರಾಠಿ) **ರಾಗ: ಮಾಂಡ್**

ಆದಿ ದಿವ್ಯ ಜ್ಯೋತಿ ಮಹಾಕಾಳೀಮಾ ನಮೋ। ಮಧುಶುಂಭ ಮಹಿಷಮರ್ಧಿನಿ ಮಹಾಶಕ್ತಿ॥ ಬ್ರಹ್ಮಾವಿಷ್ಣು ಶಿವಸ್ವರೂಪ ತುಂನ ಅನ್ಯಥಾ॥ ಸರಾಸರಸ್ಯ ಪಾಲಿಕಾ ನಮೋ ನಮಸ್ಸದಾ॥1॥ ಪರಾತ್ಪರೀ ಪರಂಜ್ಯೋತಿ ಪರಮೇಶಾಂತಿಮಾಂ। ಭವಪ್ರಿಯೆ ಭವಾನಿಮಾಂ ಹೇ ಭಕ್ತಿ ಮಾಂ ಪಾಹಿ॥ ಮಾತಾ ಪಿತಾ ಬಂಧು ಸಖ ಸರ್ವಮೇವತ್ವಂ। ಪುರಾಣಿ ಪುಣ್ಯ ರೂಪಿಣಿ ಹೇ ಪುತ್ರ ದಾತ್ರಿ ಮಾಂ॥2॥ ವೇದಗೀತ ನಾದರೂಪ ವೇದಮಾ ನಮೋ। ಮುದದೇ ಮನೋಹರಿ ಪ್ರಿಯೆ ಹೆಮಂತ್ರವಾಸಿನಿ॥ ರಾಕಾಚಂದ್ರ ವದನಿ ರಮೇ ರಾಜ್ಯದಾತ್ರಿತ್ವಂ। ಮೂಕವಾಕ್ಪ್ರದಾಯಿನಿ ನಮೋ ನಮಸ್ಸದಾ॥3॥

ಆನಂದದಾಯಿನಿ ಶ್ರೀಕಾತ್ಯಾಯಿನಿ **ರಾಗ: ಮೋಹನ-ಆದಿತಾಳ**

ಆನಂದದಾಯಿನಿ ಶ್ರೀಕಾತ್ಯಾಯಿನಿ। ಅಖಿಲಾಂಡೇಶ್ವರಿ ಶ್ರೀಶುಭದಾಯಿನಿ॥ಪ॥ ಹಿಮಗಿರಿ ಪುತ್ರಿಯೆ ಕಮಲಜ ನೇತ್ರೆಯೇ। ಭ್ರಮರ ಕುಂತಳೆಯೆ ಭವಹರ ಸತಿಯೆ। ಅಮರವಂದಿತೆ ಅಂಬಾಭವಾನಿಯೇ। ನಮಿಸುತ ಬೇಡುವೆ ಅಂಬುಜ ಲೋಚನೆ॥1॥ ಮಾಧವ ಸೋದರಿ ಮಧುಕೈಟಭಂಜಿನಿ। ಬೋಧ ಸ್ವರೂಪಿಣಿ ಭಕ್ತರ ಪಾಲಿನಿ। ಮೇದಿನಿ ಪಾಲಿನಿ ಮಧುರ ನಿವಾಸಿನಿ। ಬಾಧೆಯ ನೀಗಿಸು ಭುವನ ಮನೋಹಿನಿ॥2॥

ಅಂಬ ಮಾತಾಡೆ ದೇವಿ **ರಾಗ: ಮಲಯಮಾರುತ**

ಅಂಬ ಮಾತಾಡೆ ದೇವಿ ಮಾತಾಡೇ ಅಂಬುಜ ಮುಖಿ ಜಗದಂಬ ಮಾತಾಡೆ॥ಪ॥ ಸೋತವಳೊಡನೆ ಇಷ್ಟು ಸಿಟ್ಟು ಮಾಳ್ಪರೇನೇ। ಮಾತು ಮಾತಿಗೆನ್ನ ನೀನು ಮರೆತು ಇರುವರೇನೇ॥1॥ ಏತಕೆನ್ನ ಮೇಲೆ ಇಷ್ಟು ಕೋಪ ಕಾರಣವಿದೇನೇ। ಅನಾಥಳು ಎಂಬೋಂದು ನಿನಗೆ ಅರಿತೆ ಇಲ್ಲ ಕಣೇ॥ ಅಂಬುಜ ವದನೆ ಬಗಳಾಂಬ ಮಾತಾಡೇ ॥2॥ ಕೋಪವೆನ್ನ ಮೇಲೆ ಬರುವ ಕಾರಣವಿದೇನೇ। ಈ ಪರೀಲಿ ಅಳಲಿಸುವುದು ಉಚಿತವಲ್ಲ ಕಾಣೆ। ಈ ಪಾಪಿ ದೇಹದೊಳಗೆ ಇಷ್ಟು ಸುಖವ ಕಾಣೇನೇನೆ ವ್ಯಾಪಾರವ ಮುಗಿಸಿಬಿಟ್ಟು ಎಬ್ಬಿಸಂಬ ನೀನೇ॥3॥ ಚಿನ್ನ ಒರೆದು ನೋಡುವಂತೆ ಎನ್ನ ಗುಣವ ನೋಡೇ। ಮನ್ನಿಸಿ ಎನ್ನೊಡನೆ ನೀನು ಮುದದಿ ಮಾತನಾಡೆ। ಎನ್ನ ಪರಮಾತ್ಮನ ನಿನ್ನೊಳು ಒಂದು ಗೂಡೆ। ಇನ್ನಾದರೂ ಕರುಣವಿಟ್ಟು ಎನ್ನ ಕಾಪಾಡೇ॥4॥ ಡಿಂಬದೊಳಗೆ ಇರುವ ಜೀವ ಬೊಂಬೆಯಂತಿದ್ದೇನೆ। ನಂಬಿದವರ ಅಳಲಿಸುವುದು ಉಚಿತವಲ್ಲ ಕಾಣೆ। ಎಂಭತ್ತು ನಾಲ್ಕು ಯೋನಿಗಳಲ್ಲಿ ಉದಿಸಿ ಬಂದೇನೇನೆ। ನಂದಿಸಮ್ಮ ಎನ್ನ ಮನದ ತಾಪಂಗಳ ನೀನೇ॥5॥ ಹುಟ್ಟಿ ಹುಟ್ಟಿ ಹೊಂದಿ ಹೊಂದಿ ಕಷ್ಟಪಟ್ಟೆ ನಾನೇ। ದುಷ್ಟರ ಸಂಗವ ಬಿಡಿಸಿ ಧನ್ಯಳ ಮಾಡೆ। ನೀ ಇಷ್ಟು ಮಂದಿಯೊಳಗೆ ಎನ್ನ ಎಣಿಕೆ ಮಾಳ್ಪರೇನೇ। ಇನ್ನೆಷ್ಟಾದರೂ ಎನ್ನ ನಿನ್ನ ಮನಸೇ ಒಲ್ಲದು ಕಾಣೇ॥6॥ ಪಾದಾವಧಾನ ಪರಾಕು ಪಾಹಿ ಬಗಳಾಂಬ ಸಾದರ ಸದ್ಗುರು ಮುದ್ದು ಸಲಹೇ ಜಗದಂಬ। ಮಾಧವನನುಜೆ ಕಾಯೇ ಮೊರೆಯ ಲಾಲಿಸಂಬ। ಆನಿ ಚಿದಾನಂದತ ಮುದ್ದು ಆತ್ಮ ಬಗಳಾಂಬ॥7॥

ಅಂಬಾ ಅನುದಿನ ನಂಬಿದೆ **ರಾಗ: ಕಾಂಬೋಧಿ**

ಅಂಬಾ ಅನುದಿನ ನಂಬಿದೆ ನಿನ್ನ ಪದಾಂಬುಜವಾ। ನಿತ್ಯ ಕಲ್ಯಾಣಿ ಅಂಬಾ॥ಪ॥ ಚಂದನ ಕುಂಕುಮ ಗಂಧಾಕ್ಷತೆಯಿಂದ। ಶಂಭುಪ್ರಿಯೆ ನಿನ್ನ ಆನಂದದಿ ಪೂಜಿಪೆ॥1॥ ಕರುಣಿಸು ತಾಯೆ ನಿನ್ನ ವರದಹಸ್ತಗಳಿಂದ। ನಿರತ ಸೌಭಾಗ್ಯವಾ ನಿತ್ಯ ಮಲ್ಲಿಗೆಯೂ॥2॥ ಕರಿಮುಖ ಮಾತೆಯೆ ದುರಿತವ ಕಳೆದೆನ್ನ। ಪಾಲಿಸು ಬೇಗನೇ ತಾಯೇ॥3॥

ಇದೇ ನನ್ನ ಬಿನ್ನಹ ನಿನಗೆನ್ನ

ಇದೇ ನನ್ನ ಬಿನ್ನಹ ನಿನಗೆನ್ನ ತಾಯೆ। ದಯಪಾಲಿಸಮ್ಮ ಜಗದಂಬೆ ಮಾಯೆ।।ಪ।। ಬಿರುಗಾಳಿ ಮಳೆಯೊಳು। ಬಗ್ಗಡವಾಗದೇ। ಮಾಗಿಯ ಛಳಿಯೊಳು ಘನಹಿಮವಾಗದೇ। ಬಾಳಿನ ಹೊನಲು ಬ್ರಹ್ಮಾಂಬುದಿಗೆ ನಿರಂತರವಾಗೀ ಹರಿಯಲಿ ಸದಾ।।1।। ಬಾಳನು ಬೈಯದೇ ಎದೆಗುಂದದಳದೇ ಭೂಮಿಯು ನಿನ್ನ ಮಡಿಲೆಂದು ತಿಳಿದು। ದೃಢದಿಂದ ಬಾಳೀ। ಮೃತ್ಯುವನಣಕಿಪ। ಶಾಂತಿಯ ಫಲವೆನಗಿರಲಿ ಸದಾ।।2।।

ಈಶ್ವರಿ ಸುರಸುಂದರಿ ಭುವನೇಶ್ವರಿ(ಮರಾಠಿ) — ರಾಗ: ಮೋಹನ-ಏಕತಾಳ

ಈಶ್ವರಿ ಸುರಸುಂದರಿ। ಭುವನೇಶ್ವರಿ ಚಾಮುಂಡೇಶ್ವರಿ। ಶಂಕರಿ ಶಾಕಾಂಬರಿ। ಮಾಹೇಶ್ವರಿ ಉಮಾಗೌರಿ।।ಪ।। ಕಷ್ಟಸಂಹಾರಿಣಿ ದುಷ್ಟ ಸಂಹಾರಿಣಿ। ಶಿಷ್ಟ ಪಾಲಿನಿ ಜಯನಾರಾಯಣಿ। ವಿಶ್ವಧಾರಿಣಿ ಜಗತ್‌ಕಾರಿಣಿ। ಸರ್ವಹಾರಿಣಿ ಜಯಕಲ್ಯಾಣಿ।।1।। ತ್ರಿಭುವನ ಮೋಹಿನಿ ಭುವನ ಪಾಲಿನಿ। ವನವಿಹಾರಿಣಿ ಸಿಂಹವಾಹಿನಿ। ಜನಅಘಮೋಚನಿ ಸುಜನಹಿತೈಷಿಣಿ। ಸುರಜನ ಮಾನಿನಿ ಜಯ ಭವಾನಿ ।।2।। ಕಮಲನಯನಿ ಸುಕೋಮಲವದನಿ। ಪರಿಮಳ ಪುಷ್ಪಮಾಲಾಶೋಭಿನಿ। ಕಾಮಿತದಾಯಿನಿ ಕರುಣಕಟಾಕ್ಷಿಣಿ। ಕುಮಾರಿ ರಮಣಿ ಕಮನೀಯ ಕಾಮಿನಿ।।3।। ಜೈ ಜೈ ತಾರ ಜಗತ್ ಸಾರಾ। ನಿರಾಕಾರ ವಿಶ್ವಾಧಾರಾ। ಸುಚಾರುಮತಿಸತಿ ಸಚ್ಚಿದಾನಂದ। ಶಾಂತಿವಿದ್ಯುತ್‌ಕಾಂತಿ ಚಂದ್ರಾರ್ಕಜ್ಯೋತಿ।।4।।

ಉತ್ಸವ2 ದೇವಿ ಉತ್ಸವ ವಾಸವಾಂಬೆಯ — ರಾಗ: ಮೋಹನ

ಉತ್ಸವ ಉತ್ಸವ ದೇವಿ ಉತ್ಸವ। ಉತ್ಸವ ದೇವಿ ಉತ್ಸವ। ವಾಸವಾಂಬೆಯ ಉತ್ಸವ। ಕನ್ನಿಕಾಂಬೆಯ ಉತ್ಸವ।।ಪ।। ಪೆನುಗೊಂಡಪುರದಲ್ಲಿ ಗೋದಾತೀರದಲ್ಲಿ। ಮಂಗಳವಾದ್ಯವು ಮೊಳಗುತಿದೆ। ಸಂತಸದಿಂದಲಿ ಭಕ್ತಜನಾಂಗದ। ಜಯ ಜಯಕಾರವು ಮೊರೆಯುತಿದೆ।।1।। ಚಿಲಿಪಿಲಿಗುಟ್ಟುತ ಪಕ್ಷಿಗಳೆಲ್ಲವು। ಚಕ್ರಾಕಾರದಿ ಸುತ್ತುತ ಬಂದು। ನಮೋ ನಮೋ ಎಂದು ನಮಿಸುವ ತೆರದಿ। ಚಿತ್ರವಿಚಿತ್ರದಿ ಕೂಗುತಿದೆ।।2।। ಪುಷ್ಪ ಪಲ್ಲಕ್ಕಿಯ ಸಿಂಹಾಸನದಲಿ ಕುಳಿತು। ನಗುತಿಹಳು ತಾಯಿ ವಾಸವಿ। ದೀಪೋತ್ಸವದಲಿ ಮಹಾವೈಭವಧಿ। ಮೆರೆಯುತ ನಿಂತಿಹ ವಾಸವಿಯೆ।।3।। ಭಾಗ್ಯಾಧಿದೇವಿ ಬಾರಮ್ಮ ತಾಯೇ। ಭೀಕರ ಪಾಪವ ಹರಿಸುವಳೇ। ಭಕ್ತವತ್ಸಲೆ ಬೆಂಬಿಡದೆಮ್ಮನು। ಕಾಯುವ ಶ್ರೀದೇವಿ ವಾಸವಿಯೆ।।4।। ಭಾರತವಿಖ್ಯಾತ ಭಗವದ್ರೂಪೆ। ಬಾಲಹನುಮನ ಜನನಿಯ ಉತ್ಸವ। ಭೋರ್ಗರೆಯುವ ಭಕ್ತವೃಂದದ ಮಧ್ಯೆ। ನಡೆಯುತ್ತಿರುವ ಮಹೋತ್ಸವ ।।5।।

ಎಂತು ಬಣ್ಣಿಸಲಿ ನಿನ್ನ — ರಾಗ: ಆನಂದಭೈರವಿ

ಎಂತು ಬಣ್ಣಿಸಲಿ ನಿನ್ನ ಮಂಗಳಮೂರ್ತಿಯನು। ಸಂತಸ ನೀಡುವ ನಿನ್ನ ಸೌಂದರ್ಯವನು ।।ಪ।। ಪೀತಾಂಬರ ವಜ್ರ ಕಿರೀಟ ಮುಕುಟವ ಧರಿಸಿ। ನಡುವಿಗೆ ವಡ್ಯಾಣವಿಟ್ಟು ಕೈಗೆ ಕಂಕಣ ತೊಟ್ಟು। ಪಚ್ಚೆ ಮುತ್ತಿನಹಾರ ಗೆಜ್ಜೆ ಅಡ್ಡಿಕೆ ಧರಿಸಿ। ಮುಕುರ ಮೂಗುತಿಯನಿಟ್ಟು ಶೋಭಿಸುತಿರುವೆ। ಕಾಳಿಕ ದುರ್ಗಾಪರಮೇಶ್ವರಿಯೆ ಪಾಲಯಮಾಂ। ಅಖಿಲಾಂಡೇಶ್ವರಿ ಚಾಮುಂಡೇಶ್ವರಿ ಪಾಲಯಮಾಂ ।।1।। ಹೆರಳು ಬಂಗಾರ ಕುಚ್ಚು ಮಲ್ಲೆ ಮಾಲೆಯ ಮುಡಿದ। ಹಣೆಯಲಿ ಕಸ್ತೂರಿ ತಿಲಕ ಬೈತಲೆ ಬಟ್ಟು। ಕಮಲದಳ ನೇತ್ರಳೆ ಕೆಂದಾವರೆ ತುಟಿಗಳಿಂದ। ಕಿರುಗೆಜ್ಜೆ ಕಾಲುಂಗುರ ಘಲುಘಲು ಎನುತ। ಜಗದೋದ್ಧಾರಳೆ ಜಗಜ್ಜನನಿಯೆ ಪಾಲಯಮಾಂ। ಕುಕ್ಕೆ ಸ್ವಾಮಿಯ ಜಗನ್ಮಾತೆಯೆ ಪಾಲಯಮಾಂ।।2।।

ಎಂಥಾ ಮುದ ನೀಡಿದೆ — ರಾಗ: ಆರಭಿ, ರೂಪಕತಾಳ

ಎಂಥಾ ಮುದ ನೀಡಿದೆ। ಶ್ರೀ ನಿಮಿಷಾಂಬೆಯ ಪೂಜೆ।।ಪ।। ಎಲ್ಲಿ ನೋಡಲಿ। ಕದಳಿ ಕಂಬವು। ಎಲ್ಲಿ ನೋಡಲಿ। ತಳಿರು ತೋರಣ। ಎಲ್ಲಿ ನೋಡಲಿ। ಸುಗಂಧ ದ್ರವ್ಯವು। ಎಲ್ಲಿ ನೋಡಲಿ। ಹೊಳೆವ ಜ್ಯೋತಿಯು।।1।। ಶುಕ್ರವಾರದಿ

ಶುಭವ ಕೋರಿ। ಭಕ್ತರೆಲ್ಲ। ಬಂದು ಸೇರಿ। ಭಕ್ತಿಭಾವ।ದಿಂದ ನಮಿಸಿ। ದರ್ಶಿಪೆವು। ನಿನ್ನ ಪ್ರಾರ್ಥಿಸಿ।।2।। ಕುಸುಮಗಳನು। ಕಿತ್ತುನಾವು। ಕುಸುಮ ನೇತ್ರೆಗೆ। ನಿವೇದಿಸಿ। ಮಂಗಳವ ಕೋರಿ ಪಾಡಿ। ಆರುತೀಯ ಬೆಳಗುತಲಿ।।3।।

ಎಷ್ಟೊಂದು ಅಲಂಕಾರ **ರಾಗ: ಶುಭಪಂತುವರಾಳಿ, ಆದಿತಾಳ**

ಎಷ್ಟೊಂದು ಅಲಂಕಾರ ಎಷ್ಟೊಂದು ಶೃಂಗಾರ। ಏನೆಂದು ಹೊಗಳಲಿ ಅಮ್ಮ ನಿನ್ನ। ಏನೆಂದು ಹೊಗಳಲಿ ಅಮ್ಮ ನಿನ್ನ।।ಪ।। ಚಂಡಿಚಾಮುಂಡಿ ನೀನು। ಕಾಳಿ ಕಾಮಾಕ್ಷಿ ನೀನು।।ಅ.ಪ।। ಏಕಾಂಬರೇಶ್ವರಿ ದುರ್ಗಾಪರಮೇಶ್ವರಿ। ಏಳೇಳು ಜನ್ಮದ ಪುಣ್ಯವಮ್ಮ। ಎನಗೆ ಏಳೇಳು ಜನ್ಮದ ಪುಣ್ಯವಮ್ಮ। ಎನಗೆ ಏಳೇಳು ಜನ್ಮದ ಪುಣ್ಯವಮ್ಮ।।1।। ಕ್ಷೀರಾಭಿಷೇಕದಿ ತಣಿದಿರುವೆಯಮ್ಮ। ಪನ್ನೀರಿನಿಂದಲಿ ಮಿಂದಿಹೆಯಮ್ಮ। ಪಂಚಾಮೃತ ಉಂಡು ದಣಿದಿಹೆಯಮ್ಮ। ಮಧುವನ್ನು ಕುಡಿದು ಕುಣಿದಿಹೆಯಮ್ಮ।। ನೀನು ಕುಣಿದಿಹೆಯಮ್ಮ।।2।। ಅರಿಶಿಣ ಗಂಧ ಲೇಪನದಿಂದ। ಕುಂಕುಮ ಚಂದನ ಶೃಂಗಾರದಿಂದ। ಪಟ್ಟೆ ಪೀತಾಂಬರ ಎಷ್ಟೊಂದು ಚೆಂದ। ನಿನ್ನ ನೋಡುವುದೇ ಕಣ್ಣಿಗಾನಂದ।।3।। ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ। ಮಲ್ಲೆ ಗುಲಾಬಿ ಪರಿಮಳವಮ್ಮ। ಬಗೆ ಬಗೆ ಪುಷ್ಪಾಲಂಕಾರಿ ನೀನಮ್ಮ। ಇಂದಿನ ದಿನವೆ ಶುಭ ದಿನವಮ್ಮ। ನಮಗೆ ಇಂದಿನ ದಿನವೆ ಶುಭದಿನವಮ್ಮ।।4।। ಝುಗಝುಗಿಸುವ ದೀಪಧೂಪ ನಿನಗಮ್ಮ। ಕರ್ಪೂರದಾರತಿ ಬೆಳಗುವೆವಮ್ಮ। ಕಲ್ಯಾಣಿ ಕಾತ್ಯಾಯಿನಿ ದೇವಿ ನೀನಮ್ಮ। ಕಾಮಿತಗಳ ನೀಡಿ ಕರುಣಿಸು ಬಾರಮ್ಮ।।5।। ಭಕ್ತರ ಮೊರೆ ಕೇಳಿ ಬಳಿ ಬಂದು ನಿಲ್ಲಮ್ಮ। ಭಾಗ್ಯವ ಕರುಣಿಸಿ ಅಭಯವ ನೀಡಮ್ಮ। ಬಾಲ ಹನುಮನ ಜನನಿ ನೀನಮ್ಮ। ಬಾಗಿ ನಮಿಸಿ ನಿಂದು ಮಂಗಳ ಪಾಡುವೆವಮ್ಮ।।6।।

ಓಂ ರಾಜರಾಜೇಶ್ವರಿಯೇ **ರಾಗ: ಕುರಂಜಿ**

ಓಂ ರಾಜರಾಜೇಶ್ವರಿಯೇ ಓಂ ಜಯ ಜಗದೀಶ್ವರಿಯೇ। ಬಾಲಾ ತ್ರಿಪುರ ಸುಂದರಿಯೇ ಲಲಿತಾ ತ್ರಿಪುರ ಸುಂದದಿಯೇ ನಮಿಸುವೆ ಹೇ ಮಾತೆ।।ಪ।। ತಂದೆಯು ನೀನೇ ತಾಯಿಯು ನೀನೇ। ಇಹಪರ ಗತಿಯಮ್ಮ। ತಾಯಿ ಇಹಪರ ಗತಿಯಮ್ಮ। ನಿನ್ನಲಿ ಶರಣಾಗತಿಯೇ। ನಿನ್ನಲಿ ಶರಣಾಗತಿಯೇ। ಬಾಳಿನ ಗುರಿಯಮ್ಮ।।1।। ಎನ್ನಯ ಕರಗಳು ನಿನ್ನಯ ಚರಣವ। ಸತತವು ಅರ್ಚಿಸಲೀ। ತಾಯಿ ಸತತವು ಅರ್ಚಿಸಲೀ। ಜಿಹ್ವಾಗ್ರಜದಲಿ ನಿನ್ನಯ। ನಾಮವೇ ಮೊಳಗಿರಲಿ। ಶುಭ ನಾಮವೇ ಮೊಳಗಿರಲಿ।।2।। ನಿನ್ನಯ ಸಾಸಿರ ನಾಮವು ಮುದದಲಿ। ನಿತ್ಯವು ಪಠಿಸುವೆವು। ತಾಯಿ ನಿತ್ಯವು ಪಠಿಸುವೆವು। ನಿನ್ನಯ ಮಂತ್ರವ ಜಪಿಸಿ। ನಿನ್ನಯ ಮಂತ್ರವು ಜಪಿಸಿ। ಹರ್ಷವ ತಾಳುವೆವು।।3।। ತ್ರಿಶತಿ ನಾಮದಿ ನಿನ್ನನು ಅರ್ಚಿಸಿ। ಪಂಚದಶಿಯ ಜಪಿಸಿ। ಬಾಲಾ ತ್ರಿಪುರ ಸುಂದರಿಯ। ಚರಣ ಕಮಲ ಸ್ಮರಿಸೀ।।4।। ಸುಧಾಸಾಗರ ಕದಂಬ ವನದಲಿ। ಕಾಮೇಶ್ವರಿಯಾಗಿ। ತಾಯಿ ಕಾಮೇಶ್ವರಿಯಾಗಿ। ರಾರಾಜಿಪೆ ನೀ ಮಾತೇ ಕಾಮೇಶ್ವರನ ಸತಿಯಾಗಿ।।5।। ಶ್ರೀಚಕ್ರದಲಿ ಶ್ರೀಮಾತೆಯು ನೀ। ಮಹಾರಾಜ್ಞಿಯಾಗಿ। ಶ್ರೀ ಮಹಾರಾಜ್ಞಿಯಾಗಿ। ಸರ್ವರ ಪೋಷಿಪೆಯಮ್ಮ। ಶ್ರೀ ಲಕ್ಷ್ಮಿಯು ನೀನಾಗಿ।।6।। ಹ್ರೀಂಕರದಲ್ಲಿ ನೆಲೆಸಿರುವವಳೇ। ಓಂಕಾರ ಸ್ವರೂಪೇ ತಾಯಿ। ಓಂಕಾರ ಸ್ವರೂಪೇ ಸಾಕಾರದಲಿ ಮೈದೋರಮ್ಮ। ನಿರಾಕಾರದ ರೂಪೇ।।7।। ಮಹಾಮಾತೆಯ ಭಜಿಸುವ ಭಾಗ್ಯವ। ನೀಡಿದ ಯತಿವರರು। ಶಾಂತ ಮೂರ್ತಿಯ ಯತಿವರರು। ಅವಂತಿ ಪೀಠದಿ ಮೆರೆವ। ದೈವ ಸಮಾನರು। ನಮಗೆ ದೈವ ಸಮಾನರು।।8।। ಪಂಚ ಪ್ರೇತರ ಪಂಚಾಸನದಲಿ। ಪರಮ ಕಲ್ಯಾಣಿಯೇ ತಾಯಿ। ಪಂಚೋಪಚಾರದಿ ಪೂಜೆಯ ಮಾಡಲು। ಪರಮಪಾವನ ಗೈಯ್ಯುವಳು।।9।।

ಓಂಕಾರ ರೂಪಿಣಿ ಶ್ರೀ ಜಗದಂಬಾ **ರಾಗ: ಹಿಂದೋಳ**

ಓಂಕಾರ ರೂಪಿಣಿ ಶ್ರೀ ಜಗದಂಬಾ ಮಾಂಪಾಹಿ ಜನನೀ ಶ್ರೀ ಜಗದಂಬಾ।।ಪ।। ಮಂದಾರ ವದನೇ ಮಾನಿತ ಪೋಷಿತೆ ಅಮರವಿನುತೆ ಪುಣ್ಯಚರಿತೆ ಶೋಭಭರಿತೇ ಜನನೀ।।1।। ಆದಿಕಾರಿಣಿ ಪುರಾಣೀ ಅಖಿಲಾಂಡ ಜನನೀ ಸುರವರನುತ ಪದ ಸೇವಿತರಾಣಿ ಓ ಜಗಜನನೀ।।2।। ಶ್ರೀ ಜಗದಂಬಾ ನಿತ್ಯರಂಜನಿ ನೀರಜವದನೆ ಪಾಹಿ ಶುಭಗುಣಭರಿತೆ ನಾರದಾದಿಪೂಜಿತೆ ಮುನಿವಂದ್ಯೆ ಮಹಾಪುಣ್ಯಚರಿತೆ।।3।।

ಕಣ್ಣತುಂಬ ಕಾಣುವೆನಮ್ಮ ಕೆಳಮುಖ ರಾಗ: ಶ್ರೀ

ಕಣ್ಣತುಂಬ ಕಾಣುವೆನಮ್ಮ ಕೆಳಮುಖ ಕಣ್ಣವಳ.......। ಕರವ ಮುಗಿದು ಭಜಿಸುವೆನು ಶ್ರೀ ನಿಮಿಷಾಂಬದೇವಿಯ........॥1॥ ಜಗದ ಜನನಿ ಕಮಲಮುಖಿಯು ಹಣೆಗೆ ಹಸಿರು ತಿಲಕವ ಇಟ್ಟು। ಜರತಾರಿ ಸೀರೆಯ ಉಟ್ಟು ಶಿರಕೆ ಕಿರೀಟ ಧರಿಸಿರೋ ದೇವಿಯ॥2॥ ಸಣ್ಣ ನಡುವಿನಾ ಬಾಲೆ ಶ್ರೀನಿಮಿಷೇಶ್ವರಿಯ...। ಸುಂದರ ವಡ್ಯಾಣವಿಟ್ಟ ಚೆಲುವೆ ಮೂರುತಿಯ॥3॥ ಕಣ್ಣಿಗೆ ಅಂಜನವನ್ನು ಇಟ್ಟು ಕೆನ್ನೆಗೆ ಅರಿಶಿನವನ್ನೇ ಹಚ್ಚಿ। ಕರ್ಣಕೆ ಆಭೂಷಣವನ್ನಿಟ್ಟು ಮೂಗಿಗೆ ಮೂಗುತಿ ತೊಟ್ಟಿರೋ ತಾಯಿಯ॥4॥ ಬಲಗೈಲಿ ತ್ರಿಶೂಲ ಎಡಗೈಲಿ ಢಮರುಗ ಅಭಯ ಹಸ್ತದಿ ಕುಳಿತಿರುವ। ಬಂಗಾರದ ಹೊಳಪು ಹೊತ್ತ ವದನಾರವಿಂದಕ್ಕೆ ವಂದಿಸಿ॥5॥ ಕುಸುಮ ಪಚ್ಚೆಮಾಲೆಯಿಂದ ಶೃಂಗಾರವಾಗಿ ಕಂಗೊಳಿಪ। ಕಲ್ಪತರು ಕಾಮಧೇನು ಕಳೆಯುಳ್ಳ ಕದಪೋಳ॥6॥ ನಿಮಿಷದಲ್ಲೇ ನೋವ ದೂಡುವ ಕ್ಷೀರಸಾಗರಿಯ। ನಿಂಬೆಹಣ್ಣಿನ ಹಾರತೊಟ್ಟ ನಾದ ಸರಸ್ವತಿಯ॥7॥ ನಿಮಿಷಾನಗರದಲೀ ನೆಲೆಸಿ ನಿಮಿಷದಲೀ ವರವ ಸುರಿಸಿ। ನಯನದಲೀ ನವರಸ ಹರಿಸಿ ನಲಿದು ಮೆರೆವೋಳ॥8॥ ಶ್ರೀ ಚಕ್ರವಾಸಿನಿ ಮಧುರಾಕ್ಷರಿಯ ಚೈತನ್ಯ ದಾಯಿನಿಯಾ। ಸರ್ವಾಭರಣದಿ ಅಲಂಕೃತಳಾಗಿ ಸಿರಿಸಂಪದ ಸೌಭಾಗ್ಯ ಕೊಡುವಳ॥9॥ ದೋಷಗಳ ಪರಿಹರಿಸುತ್ತ ಅಂತರ್ಮುಖಿಯಾಗಿ ಸಂತುಷ್ಟಿಗೊಳಿಸಿ। ಧನ್ಯರನ್ನಾಗಿಸಿ ಭಕ್ತರ ಕೋರಿಕೆಯ ಈಡೇರಿಸುವವಳ॥10॥ ವೈಭವರೂಪಿ ಕೋಮಲಾಂಗೀ ಮೋಕ್ಷದಾಯಿನಿಯ। ಒಲಿದು ಹೂವ ಕೊಟ್ಟು ಬಂದು ಜಿಹ್ವೆಯೊಳಗೆ ನರ್ತಿಪೋ ತಾಯಿಯ॥11॥ ಎಷ್ಟು ವರ್ಣಿಸಲಿ ಜ್ಯೇಷ್ಠಳೇ ನಿನ್ನ ಪುಷ್ಟಿ ಮಾರ್ಗದಲಿ। ಎಳೆ ಬೆಳಕಿನ ಜ್ಯೋತಿಯ ನಡುವೆ ಮಿಂಚುತ್ತಿರುವ ಸುಂದರ ಪಾದವ॥12॥

ಕರ್ಪಗವಲ್ಲಿ ಉನ್ ಪೊರ್‌ಪಾದಂಗಳ್ (ತಮಿಳು) ರಾಗ: ಆನಂದಭೈರವಿ

ಕರ್ಪಗವಲ್ಲಿ ಉನ್ ಪೊರ್‌ಪಾದಂಗಳ್ ಪಿಡಿತ್ತೇನ್ ನರ್‌ಗತಿ ಅರುಳ್‌ವಾಯ್ ಅಮ್ಮಾ॥ದೇವಿ॥ ಪರ್ಪಲರುಂ ಪೋಟ್ರುಂ ಪದಿಮೈಲಾಪುರಿಯಿಲ್ ಸಿರ್ಪಂ ನಿರೈಂದ್ ಉಯರ್ ಸಿಂಗಾರ ಕೋವಿಲ್ ಕೊಂಡ॥ಅ.ಪ॥ ನೀಯಿಂದ ವೇಳೈ ತನ್ನಿಲ್ ಸೇಯನ್ ಎನಕ್ಕರುಳ್‌ವಾಯ್। ನಾನಿಂದ ನಾನಿಲತ್ತಿಲ್ ನಾಡುದಲ್ ಯಾರಿಡಮೊ ಏನಿಂದ ಮೌನಮಮ್ಮ ಏಳೈ ಎನಕರುಳ್‌ವಾಯ್। ಆನಂದ ಭೈರವಿಯೆ ಆದರಿತ್ತಾಳುಂಮಮ್ಮಾ॥1॥ ಬಾಗೇಶ್ವರಿ ನೀಯೆ ನಂಬಿಡುಂ ಎನ್ನೈ ಕಾಪಾಯ್। ಯೋಗೇಶ್ವರಿ ತಾಯೆ ವಾರಾಯ್ ಇದು ತರುಣಂ ಬಾಗೇಶ್ವರಿ ತಾಯೆ ಪಾರ್ವತಿಯೆ ನೀಯಿಂದ ಲೋಕೇಶ್ವರಿ ನೀಯೇ ಉಲಗಿನಿಲ್ ತುಣೈಯಮ್ಮಾ॥2॥

ಕಾತ್ಯಾಯಿನಿ ಅಂಬಾ ಭವಾನಿ ರಾಗ: ಕಾಮವರ್ಧಿನಿ

ಕಾತ್ಯಾಯಿನಿ ಅಂಬಾ ಭವಾನಿ। ಭಯನಿವಾರಿಣಿ ಭಕ್ತ ಪೋಷಿಣಿ। ಆದಿ ಮೂಲರೂಪೇ ಆದಿಶಕ್ತಿಯೇ। ವೇದವೇದ್ಯೆಯೇ ನಾದರೂಪಿಯೇ ನೀ॥1॥ ಶ್ಯಾಮಸುಂದರಾಂಗಿ ಭಾಮೆ ಶ್ರೀಮತಾಂಗಿ। ಆ ಮಹೇಶಸಂಗೀತಾ ಮಾರಸಪಾಂಗಿ। ಸ್ವಾಮಿ ವೆಂಕಟನ ಪ್ರೇಮಸೋದರಿಯೆ। ಕಾಮಿತಾರ್ಥವಿತ್ತು ಕಾಯಬೇಕು ತಾಯೆ॥2॥

ಕಾಯೌ ಶ್ರೀಗೌರಿ ಕರುಣಾಲಹರಿ (ಮೈಸೂರು ರಾಜ್ಯಗೀತೆ) ರಾಗ: ಶಂಕರಾಭರಣ

ಕಾಯೌ ಶ್ರೀಗೌರಿ ಕರುಣಾಲಹರಿ। ತೋಯೇಜಾಕ್ಷಿ ಶಂಕರೀಶ್ವರಿ॥ಪ॥ ವೈಮಾನಿಕ ಭಾಮಾರ್ಚಿತ ಕೋಮಲಕರಪಾದೆ। ಸೀಮಾತೀತ ಭೂಮಾಸ್ಪದೆ ಕಾಮಿತ ಫಲದೆ॥1॥ ಶುಂಭಾದಿ ಮದಾಂಭೋನಿಧಿ ಕುಂಭಜನಿಭದೇವಿ। ಜಂಭಾಹಿತ ಸಂಭಾವಿತೆ ಶಾಂಭವಿ ಶುಭವೀಯೆ॥2॥ ಶ್ರೀಜಯ ಚಾಮುಂಡಿಗೆ। ಶ್ರೀಜಯ ಚಾಮೇಂದ್ರ ನಾಮಾಂಕಿತ ಭೂಮೀಂದ್ರ। ಲಲಾಮನ ಮುದದೀ॥3॥

ಕಾಯಕ್ಕೆ ಕರೆಕರೆ ರೋಗ ಮನೆಯ **ರಾಗ: ಅಭೇರಿ**

ಕಾಯಕ್ಕೆ ಕರೆಕರೆ ರೋಗ ಮನೆಯ ತಾಯಿ ತಂದೆಯರು ಕಂಡರೆ ಸೇರರೀಗ। ಪ್ರಿಯದ ವಲ್ಲಭ ಕಂಡರಾಗ। ಇಂಥಾ ಗಾಯಗತ್ಸನ ಮಾತ ತಡೆಯಲಾರೆ ನೀಗ॥ಪ॥ ಯಾಕಿನ್ನು ದಯ ಬಾರದಂಬ। ಮೂರು ಲೋಕವ ಪೂರೆವ ಮೂರುತಿ ಬಗಳಾಂಬ। ಮೂರುತಿ ಜಗದಾಂಬ॥ಅ.ಪ.॥ ಅಣು ರೇಣು ತೃಣಕಾಷ್ಟ ನೀನೇ। ಎನ್ನ ಫಣೆಯಲ್ಲಿ ಬರೆದಂಥಾ ಬರಹವಿದೇನೇ। ಎಣಿಸದಿರಪರಾಧ ಕಣೇ। ಎನ್ನ ಕರುಣಿಸಿ ಸಲಹ ಬೇಕಾದರೂ ನೀನೇ॥1॥ ದಾರಿಯ ಎನಗೊಂದ ತೋರೇ। ಇಂಥಾ ಮೂರುತಿ ಮನದಣಿವಂತೆ ಸೇರೇ। ಸೇರಿದ ಸುಖವೆನ್ನ ಕಾಯೇ। ಇಂಥ ಪಾರುಪಕ್ಷಗಳೇಕೆ ಎನ್ನೊಳು ನೀರೆ॥2॥ ಒಂದನಾ ಬೇಡುವೊಳಲ್ಲ। ನಿಮ್ಮ ಚೆಂದದ ಓಲಗದೊಳಿರುವಂತಲ್ಲ। ಇನ್ನೊಂದಾಗಿ ಪಾಡೆ ಪಾಡೆವಲ್ಲ। ಆದರದಿಂದೋಳಿರಿಸೆನ್ನ ಇದು ಸ್ಥಿರವಲ್ಲ॥3॥ ಹುಟ್ಟಿ ಹುಟ್ಟಿ ಹೊಂದಲಾರೆ। ಎನ್ನ ಕಷ್ಟವ ಬಿಡಿಸಬೇಕಾದರೂ। ನೀನೇ ಇನ್ನೆಷ್ಟು ನಾ ಬೇಡಿಕೊಂಬೆನೇ। ಗುರು ಶ್ರೇಷ್ಟಚ್ಯುತಾನಂತ ಬಗಳಾಂಬ ನೀನೇ॥4॥

ಕಾಳಿ ಮಹೇಶ್ವರಿ ಪಾರ್ವತಿ ಶಂಕರಿ **ರಾಗ: ಪುನ್ನಾಗವರಾಳಿ**

ಕಾಳಿ ಮಹೇಶ್ವರಿ ಪಾರ್ವತಿ ಶಂಕರಿ। ಶರಣಂ ಶರಣಂ ಶರಣಮ್ಮ॥ಪ॥ ವಾಣಿ ವೀಣಾ ಪಾಣಿ ಜೈಜೈ। ವಾಗೀಶ್ವರಿ ಜಗದೀಶ್ವರಿ ಜೈ ಜೈ। ವಿದ್ಯಾದಾಯಿನಿ। ವಿಶ್ವ ಮೋಹಿನಿ। ವರದೇವಿ ಕಾಳಿ ಲಲಿತೆ॥1॥ ದುರ್ಗವಿಲಾಸಿನಿ ದುರ್ಗೇ ಜೈ ಜೈ। ಕಾಲವಿಲಾಸಿನಿ ಕಾಳಿ ಜೈ ಜೈ। ಉಮಾ ರಮಾ ಬ್ರಹ್ಮಾಣಿ ಜೈ ಜೈ। ರಾಧಾ ಸೀತಾ ರುಕ್ಮಿಣಿ ಜೈ ಜೈ॥2॥

ಕಂಚಿ ಕಾಮಾಕ್ಷಿ ರಕ್ಷಿಂಚುಮಾಂ **ರಾಗ: ಸಾರಂಗ, ಆದಿತಾಳ**

ಕಂಚಿ ಕಾಮಾಕ್ಷಿ। ರಕ್ಷಿಂಚುಮಾಂ। ಪಂಚ ಕಲ್ಯಾಣಿ। ಪಾಪವಿಮೋಚಿನಿ॥ಪ॥ ತ್ರಿಪುರ ಸಂಹಾರಿಣಿ। ತ್ರಿಭುವನ ಪೋಷಿಣಿ। ತ್ರಿಪುರ ಸುಂದರಿಮಣಿ। ತ್ರಿನಯನ ರಮಣಿ। ಸಫಲಮು ಚೇಯವೆ। ನಾ ತಪಮುಲನೂ। ಚಪಲತೆ ನೇತ್ರೆ ಶ್ರೀ। ಪಶುಪತಿ ರಮಣಿ॥1॥ ಷೋಡಶ ಶಂಕರಿ। ಸ್ವರ್ಣಮಹೇಶ್ವರಿ। ಜಾಡನು ತೆಲಿಯಕ। ಗೋರಿತಿನೀಶ್ವರಿ।ಪಾಡೆದ ಷಣ್ಮುಖಪ್ರಿಯ ರಾಗಮುತೋ ಗೌರಿ। ವೇಡಿತಿ ನೀ ಪದ ಚರಣಮುಲೀಶ್ವರಿ॥2॥ ಚಾಮುಂಡೇಶ್ವರಿ ಚಲ್ಲನಿ ತಲ್ಲಿವೈ। ಕ್ಷೇಮ ಮುಗಾ। ದೀ ವಿಂಚಿ ಗಾವವೆ। ಕಾಮಿತಾರ್ಥ ಮುಲಿಚ್ಚಿ। ಕರುಣ ತೋ ಜೂಡವೆ। ಪ್ರೇಮತೊ ಜೂಚಿ। ಮೀನಾಕ್ಷಿನಿ ಬ್ರೋವವೆ॥3॥

ಕಂಚಿ ಕಾಮಕೋಟಿ ಪೀಠವಾಸಿನಿ **ರಾಗ: ಕಲ್ಯಾಣವಸಂತ, ರೂಪಕ**

ಕಂಚಿ ಕಾಮಕೋಟಿ ಪೀಠವಾಸಿನಿ। ಸಂಚಿತ ದುರಿತರಾಶಿ ವಿನಾಶಿನಿ॥ಪ॥ ಪಂಚಪ್ರೇತ ಮಂಚಾಧಿಶಾಯಿನೀ। ಪಂಚಮೀ ಪಂಚಶತ್‌ಪೀಠರೂಪಿಣಿ॥ಅ.ಪ॥ ಪರಮೇಶ್ವರ ಪ್ರಿಯೆ ಪರಾಶಕ್ತಿ ಸ್ವರೂಪಿಣಿ। ಹರಿಹರವಿರಿಂಚಾದಿಸೇವಿತೆ ಹರ್ಷೋಲ್ಲಾಸಿನಿ। ನರಹರಿ ಸೋದರಿ ದಾನವಕುಲ ಸಂಹಾರಿಣಿ। ವರದಾ ಅಭಯೆ ವಿಜ್ಞಾನ ಘನ ರೂಪಿಣಿ॥1॥ ಸರ್ವಾಭರಣ ಭೂಷಿತೆ ಸಂಮೋಹಿನಿ। ಸರ್ವಾತ್ಮಿಕೆ ಸರ್ವಸಾಕ್ಷಿಣೀ। ನಿರ್ವಾಣದಾಯಿನೀ। ನಿರಂಜನಿ ಸರ್ವಾಲಂಕಾರಯುತೆ ದೇವೀ ಕಾತ್ಯಾಯಿನಿ॥2॥

ಕಾಂಚಿಪುರತ್ತಿಲ್ ನೀ ಕಾಮಾಕ್ಷಿಯಾಂ (ತಮಿಳು) **ರಾಗ:ಶುದ್ಧಧನ್ಯಾಸಿ, ಆದಿತಾಳ**

ಕಾಂಚಿಪುರತ್ತಿಲ್ ನೀ ಕಾಮಾಕ್ಷಿಯಾಂ। ಮಧುರೆಯಿಲ್ ದೇವೀ ಮೀನಾಕ್ಷಿಯಾಂ।2 ಸಾರಿ॥ಪ॥ ಸಮಯಪುರತ್ತುನ್ ತಿರುವೇರ್ ಕಾಟಿಲ್ಲುಂ॥2ಸಾರಿ॥ ಸರ್ವೇಶ್ವರಿ ನೀ ಕುರುಮಾರಿಯಾಂ॥ಅ.ಪ.॥ ಕೊಲ್ಲೂರಿಲ್ ನೀ ಮೂಕಾಂಬಿಕಾಂ। ಮೂನ್ರುಮ್ ಸೇರುನ್ನ ನಾಡಾಂಬಿಕಾಂ॥2ಸಾರಿ॥ ಕೊಡುನಲ್ಲೂರಿಲ್ ಕಣ್ಣಗಿಯಾಂ॥2ಸಾರಿ॥ ಚೋಟಾನಿಕರೆಯಿಲ್ ನಾರಾಯಣಿ॥1॥ ಅಮ್ಮೇನಾರಾಯಣ, ಭದ್ರೆ ನಾರಾಯಣ। ಕಾಣಿಪಟ್ಟಿಲ್ ನೀಭದ್ರಕಾಳಿಯಾಂ। ತಿರುಪತಿ ದೇವಿ ಪದ್ಮಾವತಿಯಾಂ॥2ಸಾರಿ॥ ಮಳಯಾಳ ಪಾದತ್ತಿಲ್ ಕನ್ಯಾಕುಮಾರಿ॥2॥ ಅಮ್ಮೇ ಜಗದೀಶ್ವರೀ, ದೇವೀ

ಯೋಗೇಶ್ವರಿ। ಲಕ್ಷ್ಮೀ ಭುವನೇಶ್ವರಿ, ಭದ್ರೇ ಶಿವಶಂಕರೀ॥3॥

ಜಗದಾಂಬಿಕೆಯೆ ಆದಿಪರಮೇಶ್ವರಿನೀಯೇ (ತಮಿಳು) **ರಾಗ: ಶಂಕರಾಭರಣ**

ಜಗದಾಂಬಿಕೆಯೆ ಆದಿಪರಮೇಶ್ವರಿನೀಯೇ। ಕರುಣಾಕರಿ ಏಳೈ ಎನ್ಮೀದು ಆಂಡು ಅರುಳ್‌ಸೈಯ್ಯೇ॥ಪ॥ ದೇವಾದಿದೇವರ್ ಫಣಿಯುಂ ಹೃದಯ ಸಹೋದರಿ। ತೇಜೋಮಯಿ ಯಾನ್ ಜಗನ್ಮೋಹಿನಿಯೆ ॥ಅ.ಪ.॥ ಆಧಾರಮಾನ ಜ್ಞಾನಸುಂದರಿ ಮಾತ। ಮಹಿಷಾಸುರ ಸಂಹಾರಿ॥ ಮಧುನೀಲಿ ನೀ ತಿರೈಸುಲಿ। ವರದಾಯಕಿನೀಯೇ ಗತಿ॥ ವೇರೇದುಂ ಇಲ್ಲೆಯೇ। ಕರುಣಾಕರಿಯೈ ಎನ್ಮೀದು ಆಂಡರುಳ್ ಸೈಯ್ಯೇ॥ಚ॥

ಜಪಾಕುಸಮ ಭಾಸುರೇ ಸಲಹೌ **ರಾಗ:ತೋಡಿ, ಆದಿತಾಳ**

ಜಪಾಕುಸುಮ ಭಾಸುರೇ। ಸಲಹೌ ದೇವಿ ದೀನ ಮಂದಾರೆ॥ಪ॥ ಕೃಪಾ ಕಟಾಕ್ಷವ ನೀಡು ಉದಾರೇ। ಅಪಾರ ಮಹಿಮೆ ಆತ್ಮಾ ರಾಮೇ॥1॥ ಪರಮ ದಯಾಕರಿ ಪಾರೇ ವಾರೇ। ಪರಮೇಶ್ವರಿ ಶ್ರೀಪತಿ ಮಣಿ ಹಾರೆ॥2॥ ಗಿರೀಶ ಸುಮ ಸುಕುಮಾರ ಶರೀರೆ। ಸುರವರನುತೆ ಹರಿಕೇಶ ಮನೋಹರೇ॥3॥

ಜಯ ಜಗದಂಬಾ ಜಯ ಜಗದೀಶ್ವರೀ (ಹಿಂದಿ) **ರಾಗ: ಮಾಲ್ ಕೌಂಸ್**

ಜಯ ಜಗದಂಬಾ ಜಯ ಜಗದೀಶ್ವರಿ ಉಮಾ ಗೌರಿ ಜಯ ಶಿವ ಶಂಕರೀ॥ಪ॥ ಸೂರ್ಯ ಚಂದ್ರ ದ್ಯೂತಿಜ್ಞಾನಾಜ್ಞಿ ಚಿನ್ಮಯಿ ಆದಿಶಕ್ತಿ ಪರಾವಿದ್ಯಾ ಬ್ರಹ್ಮಮಯಿ॥ಅ.ಪ.॥ ಹಿಮ ಮೈನಾ ನಂದಿನಿ ಗೌರಿ ಹೇಮಾಂಗಿನಿ। ಶಿವಾನಂದದಾಯಿನಿ ನಂದಿವಾಹಿನಿ। ಸಕಲ ರಾಶಿ ಪರ ವನಮಾಲ ಶೋಭಿನಿ। ಭಸ್ಮತಿಲಕ ಭಾಲ ಮಹಾಯೋಗಿನಿ॥ ಲೋಕ ಪಾವನಿ ತ್ರಿಭುವನ ಜನನಿ ಜ್ಞಾನವೈರಾಗ್ಯ ಭಕ್ತಿ ಮುಕ್ತಿ ಪ್ರದಾಯಿನಿ॥1॥ ಚಂದಿರ ವದನ ಸುವರ್ಣ ವರಣಾ। ಸ್ವರ್ಣಾಭರಣ ಸರ್ವಾಯುಧ ಧರಣ। ಸಿಂಹವಾಹಿನಿ ತ್ರಿಶೂಲ ಧಾರಿಣಿ। ಸಮರ ಸಿದ್ಧ ಘೋರ ಅಸುರಮರ್ದಿನಿ ಶರಣ ದೇವ ಋಷಿ ಮುನಿ ನರ ರಕ್ಷಿಣಿ। ಕಾಮಾಕ್ಷಿ ಮೀನಾಕ್ಷಿ ವಿಶಾಲಾಕ್ಷಿ ಭವಾನಿ॥2॥ ತನುಮನ ಧನ ತುಮ್ಹಾರೇ ಚರಣಾರ್ಪಣ। ಮಾಂಗೂ ಭಕ್ತಿ ದೃಢ ಅಖಂಡ ಸ್ಮರಣಾ। ತುಮ್ಹಾರೇ ನಾಮ ಜಪೂ ತುಮಕೋ। ಧ್ಯಾವು ಹರುಷ ಹೃದಯ ಭರ ಆರತಿ ದಿಖಾವೂ। ಜಯ ಗಜವದನ ಷಡಾನನ ಮಾತಾ। ಅಖಿಲಾಂಡೇಶ್ವರ ಕೇ ಪ್ರಿಯಕಾಂತ ತುಮಹೋ ಲಕ್ಷ್ಮೀ ಸರಸ್ವತಿ ಸೀತಾ ವೇದ ಶೃತಿ ಸ್ಮೃತಿ ಭಗವದ್ಗೀತಾ॥3॥

ಜಯ2 ದುರ್ಗೆ ಕಾಳಿ(ಮರಾಠಿ) **ರಾಗ: ಉದಯರವಿಚಂದ್ರಿಕೆ, ಆದಿತಾಳ**

ಜಯ ಜಯ ದುರ್ಗೆ ಜಯ ಜಯ ಕಾಳಿ। ಜಯ ಜಯ ಅಂಬೆ ಮಾ...। ಭಾರತಿ ಅಂಬೆ ಭಗವತಿ ಅಂಬೆ। ಜಯ ಜಯ ಅಂಬೆ ಮಾ...। ಜಯ ಜಯ ಅಂಬೆ, ಜಗದಂಬೆ॥1॥ ಸಿಂಹವಾಹಿನಿ, ಅಮೃತ ಪ್ರದಾಯಿನಿ। ದೇವಿಮಾ... ಜಯ ಜಯ ಮಾ। ತ್ರಿಶೂಲ ಧಾರಿಣಿ ಅಸುರ ಸಂಹಾರಿಣಿ। ಶರಣಂ ಶರಣಂ ದುರ್ಗೆ ಮಾ...। ಶರಣಂ ಶರಣಂ ಕಾಳಿಮಾ॥2॥ ಹಂಸವಾಹಿನಿ, ಜ್ಞಾನಪ್ರದಾಯಿನಿ। ದೇವಿ ಮಾ... ಜಯ ಜಯ ಮಾ...। ವೀಣಾವಾದಿನಿ, ಅಜ್ಞಾನ ನಾಶಿನಿ। ಶರಣಂ ಶರಣಂ ಸರಸ್ವತಿ ಮಾ। ಶರಣಂ ಶರಣಂ ಶಾರದೆ ಮಾ...॥3॥

ಜಯ ಜಗದಂಬೆ ಶ್ರೀ ರೇಣುಕಾಂಬೆ **ರಾಗ: ದರ್ಬಾರ್**

ಜಯ ಜಗದಂಬೆ ಶ್ರೀ ರೇಣುಕಾಂಬೆ ನಿನ್ನನೆ ನಂಬಿನಾ ಬಂದೆ। ಕೃಪೆಯಾ ನೀಡಮ್ಮ ದೇವಿ ಅಭಯ ನೀಡಮ್ಮ ತಾಯೆ॥ಪ॥ ಅರಿಶಿನ ಕುಂಕುಮ ಶಾಶ್ವತ ನೀಡು ಮುತ್ತೈದೆ ಸೌಭಾಗ್ಯ ನೀ ಕಾಪಾಡು। ಮನೆಯಲಿ ನಗುವನು ನೀಡು। ಕಷ್ಟವ ನೀ ದೂಡು ದೇವಿ ನಮ್ಮ ಕಾಪಾಡು॥1॥ ಮಂಗಳ ವಾರದ ಮಂಗಳ ಸಮಯದಿ। ಸರ್ವ ಮಂಗಳೇ ಮಂಗಳ ದಾತೆಯೆ। ನಿನ್ನಯ ಮಂತ್ರವ ಮನ ತುಂಬಿ ಹಾಡುವೆ। ದೇವಿ ನಾ ಬೇಡುವೆ ಇರಲಿ ನಿನ್ನ ದಯೆ॥2॥ ಅಂಗಳದಲಿ

ರಂಗುರಂಗೋಲಿ। ಹಸಿರು ತೋರಣ ಮುಂಬಾಗಿಲಲಿ। ದೀಪದ ಬೆಳಕು ಮನೆ ತುಂಬಿ ಬೆಳಗಿ ಕಾದಿದೆ ನಿನಗಾಗಿ ದೇವಿಕರುಣಿಸು ಮಾತಂಗಿ ದೇವಿ।।3।।

ಜಯ2 ದೇವಿ ದುರ್ಗಾದೇವಿಗೆ **ರಾಗ: ಪುನ್ನಾಗವರಾಳಿ, ಏಕತಾಳ**

ಜಯ ಜಯ ದೇವಿ ಜಯಜಯ ದೇವಿ ದುರ್ಗಾದೇವಿಗೆ ಶರಣು ದುರ್ಗಾದೇವಿಗೆ ಶರಣು।।ಪ।। ಪೀತಾಂಬರವುಟ್ಟು ಆಭರಣಗಳ ತೊಟ್ಟು ಕೈಯಲ್ಲಿ ಶಂಕು ಚಕ್ರವ ಪಿಡಿದಿಹ ದುರ್ಗಾದೇವಿಗೆ ಶರಣು।।1।। ಹಣೆಯ ಮಧ್ಯೆ ಕುಂಕುಮ ಹೊಳೆಯುತ। ರುಂಡಮಾಲೆಯು ಕೊರಳಲಿ ಧರಿಸಿಹ। ದುರ್ಗಾದೇವಿಗೆ ಶರಣು।।2।। ಭವಭಯ ಹಾರಿಣಿ ದುರಿತ ನಿವಾರಿಣಿ। ಭುವನ ಮನೋಹರಿ ಭವಾನಿ ಶಂಕರಿ। ದುರ್ಗಾದೇವಿಗೆ ಶರಣು।।3।। ಪರಮ ಪವಿತ್ರಳೆ ಪಾವನ ಚರಿತಳೆ। ಪಾಪವನು ಕಳೆದು ಪಾಲಿಸುವಂಥ। ದುರ್ಗಾದೇವಿಗೆ ಶರಣು।।4।। ಪಂಚಪ್ರಾಣವು ಪಂಚೇಂದ್ರಿಯವು ಎಲ್ಲಾ ರೂಪದಿ ನಿಂತಿರುವಂಥ। ದುರ್ಗಾದೇವಿಗೆ ಶರಣು ಕುಕ್ಕೆ ಸ್ವಾಮೀ ಮಾತೆಗೆ ಶರಣು।।5।।

ಜಯ4 ಪಾರ್ವತಿ ದೇವಿ **ರಾಗ: ಪುನ್ನಾಗವರಾಳಿ, ಆದಿತಾಳ**

ಜಯ ಜಯ ಜಯ ಜಯ ಪಾರ್ವತಿ ದೇವಿ। ಜಯ ಜಯ ಜಯ ಜಯ ಅಖಿಲಾಂಡೇಶ್ವರಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು ।।1।। ಜಯ ಜಯ ಜಯ ಜಯ ಲಲಿತಾಂಬೆ ದೇವಿ। ಜಯ ಜಯ ಜಯ ಜಯ ಅನ್ನಪೂರ್ಣೇಶ್ವರಿ। ಜಯ ಸದ್ಗುಣೆ ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು ।।2।। ಜಯ ಜಯ ಜಯ ಜಯ ದುರ್ಗಾದೇವಿ। ಜಯ ಜಯ ಜಯ ಜಯ ಅಣ್ಣಮ್ಮ ದೇವಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು ।।3।। ಜಯ ಜಯ ಜಯ ಜಯ ರಾಜೇಶ್ವರಿ। ಜಯ ಜಯ ಜಯ ಜಯ ಜೈ ಭುವನೇಶ್ವರಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು।।4।। ಜಯ ಜಯ ಜಯ ಜಯ ಬನಶಂಕರಿ। ಜಯ ಜಯ ಜಯ ಜಯ ಮಾರಮ್ಮ ದೇವಿ। ಜಯಸದ್ಗುಣೆ। ಜಯಸಂಪನ್ನೆ। ಜಯತು ಜಯತು ।।5।। ಜಯತು ದೇವಿ। ಜಯತು ಜಯತು। ಜಯ ಜಯ ಜಯ ಜಯ ಅಟ್ಟಿ ಲಕ್ಕಮ್ಮ ದೇವಿ। ಜಯ ಜಯ ಜಯ ಜಯ ಎಲ್ಲಮ್ಮ ದೇವಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು ।।6।। ಜಯ ಜಯ ಜಯ ಜಯ ಕಾಳಿಕಾಂಬ ದೇವಿ। ಜಯ ಜಯ ಜಯ ಜಯ ವಾಸವಾಂಬ ದೇವಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ದೇವಿ। ಜಯತು ಜಯತು।।7।। ಜಯ ಜಯ ಜಯ ಜಯ ಚಾಮುಂಡೇಶ್ವರಿದೇವಿ। ಜಯ ಜಯ ಜಯ ಜಯ ಕರುಮಾರಿಯಮ್ಮ ದೇವಿ ಜಯ ಸದ್ಗುಣೆ। ಜಯ. ಸಂಪನ್ನೆ।। ಜಯತು ದೇವಿ ಜಯತು ಜಯತು।।8।। ಜಯ ಜಯ ಜಯ ಜಯ ನಿಮಿಷಾಂಬ ದೇವಿ। ಜಯ ಸದ್ಗುಣೆ। ಜಯ ಸಂಪನ್ನೆ। ಜಯತು ಮೂಕಾಂಬಿಕಾ ದೇವಿ ಜಯತು ಜಯತು ।।9।

ತಪ್ಪೇನ ಮಾಡಿದೆನೇ ಶ್ರೀ ಲಲಿತಾಂಭ **ರಾಗ: ವಸಂತ**

ತಪ್ಪೇನಾ ಮಾಡಿದೆನೇ ಶ್ರೀ ಲಲಿತಾಂಭ। ತಪ್ಪೇನ ಮಾಡಿದೆನೆ।।ಪ।। ತಪ್ಪೇನಾ ಮಾಡಿದೆ। ಒಪ್ಪೇನೆ ನಿನಗಿದು। ಮುಪ್ಪುರಾಂತಕರಾಣಿ। ಸರ್ಪವೇಣಿ ನಾನಂತಾ। ತಪ್ಪೇನ ಮಾಡಿದೆನೆ।।1।। ಪಾತಕಿಯ ರೊಳತಿ ಘಾತಕಳಾದಂತ। ಮಾತಾನು ಲಾಲಿಸಿ। ಪ್ರೀತಿಗೊಳಿಸದಂತ। ತಪ್ಪೇನ ಮಾಡಿದೆನೆ।।2।। ಗರಳಪುರೀಶನ ತರುಣಿ ಕೇಳೆನ್ನಯ ಕರಗಳ ಪಿಡಿದು ನೀ ಕರೆದು ರಕ್ಷಿಸದಂಥಾ। ತಪ್ಪೇನ ಮಾಡಿದೆನೆ।।3।। ದುಷ್ಟಮಹಿಶಾಸನುರನ ಮೆಟ್ಟಿಮರ್ಧಿಸಿದಂತಾ। ಪುಟ್ಟ ಪಾದದಸೇವೆ। ಕೊಟ್ಟು ರಕ್ಷಿಸದಂಥಾ।।4।।

ತಾಯೆ ಕಾತ್ಯಾಯಿನಿ ಕಾಯುವುದು **ರಾಗ:ಕಾನಡಾ**

ತಾಯೆ ಕಾತ್ಯಾಯಿನಿ....। ಕಾಯುವುದುಜನನೀ।।ಪ।। ನೀ ಪೊರೆಯದೇ ಪೋಗೇ। ಕಾಪಾಡುವರುಯಾರು।

ಶ್ರೀಪುರಮಿಂದಿರೇ। ಕೋಪವಾ ಬಿಡುಬಿಡು॥1॥ ಮೌನವೀದೇಕಿಂತು। ಮೀನಾಂಕರೂಪಿಣಿ। ಮೈಸೂರು ದೊರೆಗಳಾ ಮನ್ನಿಸೀ ಸಲಹಿದೇ॥ ಮಹಿಶಾಮರ್ದಿನೀ ತಾಯೇ॥2॥

ತಿರುವಿಳಕ್ಕೇ2 ದೇವಿ ಪರಾಶಕ್ತಿ (ತಮಿಳು) **ರಾಗ: ಶ್ರೀರಾಗ**

ತಿರುವಿಳಕ್ಕೇ ತಿರುವಿಳಕ್ಕೇ ದೇವಿ ಪರಾಶಕ್ತಿ ತಿರುವಿಳಕ್ಕೆ। ದೇವಿಯಿನ್ ವಡಿವೇ ತಿರುವಿಳಕ್ಕೇ ದೇವಿಯೆ ಉನಕ್ಕು ನಮಸ್ಕಾರಂ॥ಪ॥ ಸಿರುಮೈ ಅಹಳುಂ ತಿರುವಿಳಕ್ಕೇ। ಎಂಗುಂ ಒಳಿವರುಂ ತಿರುವಿಳಕ್ಕೇ। ಇನ್ರುಂ ಒಳಿವರುಂ ತಿರುವಿಳಕ್ಕೇ। ಲಕ್ಷ್ಮೀ ಉನಕ್ಕು ನಮಸ್ಕಾರಂ॥1॥ ಮಂಗಳ ಜ್ಯೋತಿಯುಂ ತಿರುವಿಳಕ್ಕೆ। ಮಾಲೆಯಿಲ್ ಒಳಿತರುಂ ತಿರುವಿಳಕ್ಕೇ। ಕಾಲೆಯಿಲ್ ಒಳಿತರುಂ ತಿರುವಿಳಕ್ಕೇ। ಸರಸ್ವತಿ ಉನಕ್ಕು ನಮಸ್ಕಾರಂ॥2॥ ಅಷ್ಟಲಕ್ಷ್ಮೀ ವಡಿವೇ ತಿರುವಿಳಕ್ಕೇ। ಆನಂದಲಕ್ಷ್ಮೀ ತಿರುವಿಳಕ್ಕೇ। ಆಲಯ ಭೂಷಣ ತಿರುವಿಳಕ್ಕೇ। ಆದಿ ಪರಾಶಕ್ತಿ ನಮಸ್ಕಾರಂ॥3॥ ಜಗಮೆಲ್ಲ ವಿಳಂಗುಂ ತಿರುವಿಳಕ್ಕೇ। ಜಗದೀಶ್ವರಿ ವಡಿವೇ ತಿರುವಿಳಕ್ಕೇ। ಅಳಗೈ ಅಳೈಕ್ಕುಂ ತಿರುವಿಳಕ್ಕೇ। ಅಮ್ಮಾ ಉನಕ್ಕು ನಮಸ್ಕಾರಂ॥4॥

ತೋರೆ ತಾಯೆ ದಾರಿಯ **ರಾಗ: ಬಿಂದುಮಾಲಿನಿ**

ತೋರೆ ತಾಯೆ ದಾರಿಯ ಅಪಾರ ಕರುಣಾ ಸಾಗರಿ ಎಂದು। ಸಾರುತಿಹವು ಶೃತಿಗಳು॥ಪ॥ ಆಗಮನುತೇ ಅಮರ ವಿನುತೇ ಅನವರತೇ ಸುಜಕೃತೆ। ಅನುದಿನವು ಬೇಡುತಿರುವೆ ಅವಧರಿಸು ಅನುಜ ತೇ॥1॥ ಅಜಹರಿ ಹರ ಅಮರ ಗಣವು। ಅನವರತದಿ ನಿನ್ನಯ। ಅಮೋಘ ನಾಮ ಸ್ಮರಣ ಬಲದಿ ಅತುಲ ಮಹಿಮೆ ಪಡೆದರು॥2॥ ಗಾಯಿತ್ರಿ ಎನಿಸಿ ಜಪದಿ ಸಾವಿತ್ರಿ ಎನಿಸಿ ಸಲುಹಿ ಸರಸ್ವತಿ ಎನಿಸಿ ಜಗದಿ ಸಕಲ ತೇಜ ಬಲ ನೀಡುವೆ॥3॥

ತ್ರಿಪುರ ಸುಂದರಿ ತಾಯೇ ಶ್ರೀ **ರಾಗ: ರೇವತಿ, ಆದಿತಾಳ**

ತ್ರಿಪುರ ಸುಂದರಿ ತಾಯೇ ಶ್ರೀ ಕಾಳಿಕಾಂಬೆ। ತ್ರಿಲೋಕ ಸುಂದರಿ ದೇವಿ ದುರ್ಗಾಂಬೆ। ಸ್ವರ್ಣಸುಂದರಿ ಅಮ್ಮ ಪರಮೇಶ್ವರಿ ತಾಯೇ। ತ್ರಿರೂಪ ಧಾರಿಣಿ ಮಾತೆ ಚಂಡಿಕಾಂಬೆ॥ಪ॥ ಪಾಪವನು ಹರಿಸಿ ನೀ ಪುಣ್ಯ ಫಲ ನೀಡಮ್ಮ। ಫಲಪುಷ್ಪ ನಿನ್ನ ಪಾದಗಳಿಗೆ ಅರ್ಪಿಸುವೆ। ಪರಮ ಪಾವನಳೇ ಪವಾಡವ ತೋರುವಳೆ। ಪ್ರಸನ್ನಳೆ ನಮಗೆ ನೀ ಪ್ರಸಾದವ ನೀಡಮ್ಮ॥1॥ ದುಷ್ಟರನು ಶಿಕ್ಷಿಸಲು ದುರ್ಗೆಯು ನೀನಾದೆ। ಶಿಷ್ಟರನು ರಕ್ಷಿಸಲು ಮಾತೆ ನೀನಾದೆ। ಪ್ರಜ್ಞೆಯನು ನಮಗಿತ್ತು ಪ್ರಶಂಸೆಗೆ ಪಾತ್ರಳಾದೆ। ಕುಕ್ಕೆ ಸ್ವಾಮಿಯ ಮಾತೆ ಶ್ರೀ ಚಾಮುಂಡೇಶ್ವರಿಯೇ॥2॥

ತ್ರಿಭುವನ ಪಾಲಿನಿ ಅಂಬಾಭವಾನಿ **ರಾಗ: ಮೋಹನ, ಆದಿತಾಳ**

ತ್ರಿಭುವನ ಪಾಲಿನಿ ಅಂಬಾಭವಾನಿ। ತ್ರಿಶೂಲ ಧಾರಿಣಿ ಅಭಯ ಪ್ರದಾಯಿನಿ॥ಪ॥ ಸರ್ವಾಭರಣ ಭೂಷಿತೆ ಪೀತಾಂಬರ ಧಾರಿಣಿ। ಸರ್ವಮಂತ್ರ ಧಾರಿಣೆ, ಪರಂಜ್ಯೋತಿ ರೂಪಿಣಿ॥ ಸರ್ವಶಕ್ತಿ ಸ್ವರೂಪಿಣಿ ಧೂಪ ದೀಪ ಗಂಧಿನಿ। ಶಂಕರಿ ಶಾಂಭವಿ ಕದಂಬ ವಾಸಿನಿ॥1॥ ಮಾಣಿಕ್ಯ ಪದ್ಮ ಪದಕೆ ಮಯೂರಿಕೆ ಹಾರಿಕೆ। ಮಹೇಶ್ವರಿ ಬನಶಂಕರಿ ಮಂಗಳದಾಯಿನಿ॥ ಓಂಕಾರ ಬೀಜಾಕ್ಷರಿ ಕಾಮಾಕ್ಷಿ ಕಮಲಾಕ್ಷಿ। ಓಂಕಾರ ರೂಪಿಣಿ ಕುಕ್ಕೆ ಸ್ವಾಮಿ ಮಾತೆ ನೀನು॥2॥

ದುರ್ಗಾಪರಮೇಶ್ವರಿ ಅಂಬಾ ಜಗದೀಶ್ವರಿ **ರಾಗ:ಬೃಂದಾವನಸಾರಂಗ**

ದುರ್ಗಾಪರಮೇಶ್ವರಿ ಅಂಬಾ ಜಗದೀಶ್ವರಿ। ಬಾರೆಂದು ಕರೆಯುವೆನು ಚಾಮುಂಡೇಶ್ವರಿ॥ಪ॥ ಅಂದಿನಿಂದಲಿ ನಿನ್ನ ತಾಯಿಯಂದದಿ ನಿನ್ನ। ನಂಬಿ ಬಂದೆನ್ನ ಮೊರೆಯು ಕೇಳ್ವುದಿಲ್ಲವೇ। ಅಂದಿನಿಂದಲಿ ನಿನ್ನ ಪೂಜೆ ಮಾಡಿನಾ। ಇಂದೆನ್ನ ಮೊರೆ ಕೇಳಿ ಬರಲೊಲ್ಲೆಯಾ॥ ಬರಲೊಲ್ಲೆಯಾ ಅಂಬ ಜಗದೀಶ್ವರೀ। ಬಾರೆಂದು ಕರೆಯುವೆನು ಚಾಮುಂಡೇಶ್ವರಿ॥1॥ ಜಲಮಧ್ಯ ಅರಮನೆಯ ಕಟ್ಟಿಸೀ ಕಾರ್ಣಿಕಾದಿ। ಸ್ಥಿರವಾಗಿ ನೆಲೆಸಿ ನಿಂದೆ ಚಾಮುಂಡೇಶ್ವರಿ। ಶಿವ ಕಾಮೇಶ್ವರೀ ಸಿಂಹಾಸನೇಶ್ವರೀ ಅನ್ನಪೂಣೇಶ್ವರೀ। ಬರಲೊಲ್ಲೆಯಾ... ಬರಲೊಲ್ಲೆಯಾ ಅಂಬ ಜಗದೀಶ್ವರೀ।

ಬಾರೆಂದು ಕರೆಯುವೆನು ಚಾಮುಂಡೇಶ್ವರಿ॥2॥ ಅಡವಿಯಾ ಮಧ್ಯದಲ್ಲಿ ಅಕ್ಷಯಾ ಪಾತ್ರೆಯಲ್ಲಿ। ಭಿಕ್ಷೆಯನ್ನೇ ನೀಡುತ್ತಲಿ ನೆಲಸೀ ನಿಂತೇ। ಓಂಕಾರರೂಪಿಣಿಯೇ ಶ್ರೀ ಚಕ್ರವಾಹಿನಿಯೆ। ಗಾಯತ್ರಿ ಸ್ವರೂಪಿಣಿಯೆ ಬರಲೊಲ್ಲೆಯಾ। ಬರಲೊಲ್ಲೆಯಾ ಅಂಬ ಜಗದೀಶ್ವರಿ। ಬಾರೆಂದು ಕರೆಯುವೆನು ಚಾಮುಂಡೇಶ್ವರಿ॥3॥ ಹೆತ್ತ ತಾಯಿ ತಂದೆಗಳ ಪುತ್ರಿನಾನಾದರೇನು। ಸೃಷ್ಟಿಸಿದ ತಾಯಿ ನೀ ಆಲ್ಲವೇನೇ। ಇಷ್ಟು ಮೊರೆ ಇಟ್ಟರೂ ಕೇಳ್ವುದಿಲ್ಲವೇ ನಿನ್ನ। ಹೊಟ್ಟೆಯಲ್ಲಿ ಮರುಕಾವು ಹುಟ್ಟಲಿಲ್ಲವೆ ಲಲಿತಾ ಪರಮೇಶ್ವರಿ ಬಾರೆಂದು ಕರೆಯುವೆನು ಚಾಮುಂಡೇಶ್ವರಿ॥4॥

ದೇವಿ ಕಾತ್ಯಾಯಿನಿ ತ್ರಿಭುವನ ಜನನಿ **ರಾಗ: ಮೋಹನ**

ದೇವಿ ಕಾತ್ಯಾಯಿನಿ ತ್ರಿಭುವನ ಜನನಿ। ಪರಮೇಶ್ವರಿ ಭುವನೇಶ್ವರಿ ಹೇ ಜಗಜ್ಜನನಿ॥ಪ॥ ಜಗನ್ಮೋಹಿನಿ ಅಭಯಂಕರಿ ಅನ್ನಪೂರ್ಣೇಶ್ವರಿ। ಚಿದ್ರೂಪಿಣಿ ಭವಾನಿ ಶ್ರೀಶಿವಶಂಕರಿ। ಶ್ರೀಗೌರಿ ಪಾರ್ವತಿ ಚಾಮುಂಡೇಶ್ವರಿ। ಶ್ರೀ ಲಲಿತೆ ದುರ್ಗಾಮಾತೆ ರಾಜರಾಜೇಶ್ವರಿ॥1॥ ಇಷ್ಟಾರ್ಥ ಪ್ರದಾಯಿನಿ ಕಾಮಾಕ್ಷಿ। ಶ್ರೀ ವಲ್ಲಭೆ ಜಗನ್ಮಾತೆ ಮೀನಾ...ಕ್ಷಿ। ಕರುಣಾ ಮೂರುತಿ ತಾಯೆ ಮೂಕಾಂಬಿಕೆ। ಗಾಯತ್ರಿ ವಿಶಾಲಾಕ್ಷಿ ಹೇ ಜಗದಂಬಿಕೆ॥2॥

ದೇವಿ ಬಂದಾಳೆ ಚೆಲುವೆ ಬಂದಾಳೆ **ರಾಗ: ಶ್ರೀರಂಜನಿ**

ದೇವಿ ಬಂದಾಳೆ ಚೆಲುವೆ ಬಂದಾಳೆ। ತಾ ಇಂದೀವರಾಕ್ಷಿ। ಇಂದ್ರನೀಲಮಣಿ ಬಂದಾಳೆ ಚೆಲುವೆ ಬಂದಾಳೆ॥ಪ॥ ಐದು ವರ್ಷದ ಬಾಲೆಯಾಗ್ಯಾಳೆ। ತಾ ಕೊಯ್ಲದ ಮಲ್ಲಿಗೆ ಮಾಲೆ ಮುಡಿದಾಳೆ॥ಅ.ಪ॥ ಕಾಯ್ದುಕುಳಿತವರ ಕಾಯ್ದಾಳೆ। ಭಕ್ತಾರೈದ ಸುಖದಿ ತಾ ನಿಂತಾಳೆ। ಅರಿಶಿನ ಕುಂಕುಮ ತೀಡಿ ಹಚ್ಚಾಳೆ। ಪದ ಝೇಂಕರಿಸುವ ಗೆಜ್ಜೆ ಕಟ್ಯಾಳೆ। ಮಿಂಚು ಮೂಗುತಿ ಓಲೆಇಟ್ಟಾಳೆ। ಭಕ್ತರ ಶಂಕೆ ಹರಿಸಲು ತಾ ನಿಂತಾಳೆ॥1॥ ನಾಗ ಮುರಗಿ ವಂಕಿ ಹಾಕ್ಯಾಳೆ। ತಾ ನಾಗ ಕಿರೀಟವ ಧರಿಸ್ಯಾಳೆ॥ ನಾಗಿನಿಯು ತಾ ನಿಂತಾಳೆ। ಭಕ್ತರಾಗ ಮನಕೆ ತಾ ಸೋಕ್ಯಾಳೆ। ವೇದ ಸ್ವರೂಪಿ ಆಗ್ಯಾಳೆ। ತನ್ನ ಭಕ್ತರನು ಉದ್ಧಾರ ಮಾಡ್ಯಾಳೆ। ನೇಮಿಸಿ ಭಕ್ತರ ಕಾಯ್ದಾಳೆ। ತಾ ನಾನಾರೂಪದಿ ದರ್ಶನವಿತ್ಯಾಳೆ॥2॥

ನಿನ್ನ ನಂಬಿಹೆನೇ ಮಾತೇ **ರಾಗ: ಲಲಿತ**

ನಿನ್ನ ನಂಬಿಹೆನೇ ಮಾತೇ ಖ್ಯಾತೇ। ಪೂತೆ ಜಗನ್ಮಾತೆ ಲಲಿತೇ। ನಿನ್ನ ನಂಬಿಹೆನೆ ಅನ್ಯರಾ ಕಾಣೆನೆ। ಪನ್ನಗಧರನ ಚಿನ್ಮಯ ಪ್ರಿಯಳೆ॥1॥ ಭೃಂಗಕುಂತಳೇ ನೀ ಸಂಗೀತಪ್ರಿಯಳೆ। ಮಂಗಳಾಂಗಿಶಿವೆ ಮಹಾನುಭಾವೆ। ಕಂಗಳಿಂದಲೀ ಜಗಂಗಳ ಪೊರೆವ। ಗಂಗಾಧರನ ಅಂಗನಾ ಮಣಿಯೆ॥2॥ ಸೋಮಕುಲಜ ಜಾಯೆ। ಚಾಮ ಭೂಮಿಪನ। ಕಾಮಿತಾರ್ಥವೀವ। ಚಾಮುಂಡಾಂಬಿಕೇ। ಸೋಮಶೇಖರನ ಪ್ರೇಮದಾ ರಾಣಿಯೆ। ಶ್ಯಾಮಸಂದರಿಯೇ ನಮಿಪೆನೆ ನಿನ್ನ॥3॥

ನಿಮಿಷಾಂಬಾ ತಾಯೆ ನಾ ನಿನ್ನ **ರಾಗ: ಕಲಾವತಿ**

ನಿಮಿಷಾಂಬಾ ತಾಯೆ ನಾ ನಿನ್ನ ಬಳಿಗೆ। ಭಕುತಿಯಲಿ ಬಂದಿಹೆನು ತಾಯೆ। ನೀನೆಮ್ಮ ಕಾಯ್ದು ಕರುಣೆಯ ತೋರಿ। ಸಲಹುತ್ತ ಎಂದೆಂದು ಪೊರೆಯೆ॥ಪ॥ ನಿನ್ನ ನಂಬಿದ ಜನರ ಕಲ್ಯಾಣಕ್ಕಾಗಿ। ನಿಮಿಷದಲಿ ಒದಗಿ ಬರುವೆ ನೀನು। ನಿನ್ನ ಮಹಿಮೆಯ ನಾನೇನು ಬಲ್ಲೆ। ಕ್ಷಣದಲ್ಲಿ ಹರಿಸುವೆ ಭವಭಯವೆಲ್ಲ॥1॥ ಗಾಳಕ್ಕೆ ಸಿಕ್ಕ ಮೀನಿನಂದದಿ ನಾನು। ವಿಲಿವಿಲಿ ಒದ್ದಾಡುತಿಹೆನು। ಎನ್ನ ಮೊರೆಯ ಅರಿತು ಬೇಡಿದಿಷ್ಟಾರ್ಥವ। ದೈನ್ಯದಿ ಅನುಗ್ರಹಿಸು ದೇವಿಯೆ॥2॥

ನಂಬಿ ಬಂದಿಹೆವು ಶ್ರೀ ವೈಷ್ಣವಿ **ರಾಗ: ಭೈರವಿ, ಆದಿತಾಳ**

ನಂಬಿ ಬಂದಿಹೆವು ಶ್ರೀ ವೈಷ್ಣವಿ ದೇವಿಯೇ। ನಿನ್ನ ದರುಶನಕೆ ಶಿಖರದ ಗುಹೆಯೊಳು ಅಡಗಿ ನೀ ಕುಳಿತಿರುವೆ। ದರುಶನ ನಮಗಿತ್ತು ಧನ್ಯರ ಮಾಡಮ್ಮ॥ಪ॥ ಅಂಬುಜ ಮುಖಿಯೆ ಜಗದಂಬ ಮಹೇಶ್ವರಿ। ಗಂಭೀರ ಭಾಷಿಣಿ ಗೀರ್ವಾಣೀ॥ ಸಂಭ್ರಮದಿ ಧನುಜನ ಗೆಲಿದ ಮಹಾದುರ್ಗೆ। ಗಿರಿಸುತೆ ನೇತ್ರ ನೀ ಪಲ್ಲವಿ ನುಡಿಸಮ್ಮ॥1॥ ಅನುದಿನ ಪರಿಪರಿ ದುಃಖಗಳನನುಭವಿಸಿ। ದಣಿಯಿತೆನ್ನೆಯ ಮನವು ಮೌನದಲಿ। ಅಣಿಮಾದಿ ಅಷ್ಟಸಿದ್ಧಿಗಳ ಪಡೆದಿಹ ಕುಕ್ಕೆ ಸ್ವಾಮಿಮಾಡೆ ನಿನ್ನ ಮಹಿಮೆಗಳ ಕೇಳಿ ನಾ ಶರಣಾದೆ ತಾಯೆ॥2॥

ನಂಬಿದೆನು ಚೀರುಂಬ ಕಾಳಿಕಾಂಬ **ರಾಗ: ಸಿಂಧುಭೈರವಿ**

ನಂಬಿದೆನು ಚೀರುಂಬ ಕಾಳಿಕಾಂಬ।।ಪ।। ಶುಂಭಾದಿ ದೈತ್ಯರ ಡಂಭ ಮುರಿದಂಬ।।ಅ.ಪ.।। ತಿಳಿದು ಕೊಂಡೆವು ನಮ್ಮ। ಕಷ್ಟಕಾರಣವೆಲ್ಲ। ಕಲೆತು ನಾವೆಲ್ಲರುಂ। ಭಜಿಸಿ ಕೂಡಿ।। ಲಲಿತೆ ಶಂಕರಿ ಬೇರೆ। ಸಮಯದೊಳು ನಮ್ಮನಸ್ಸು। ಚಲಿಸಿ ಸತ್ಯವ ಮರೆತು। ಹಾ ಕೆಟ್ಟೆವಯ್ಯೋ।।1।। ನ್ಯಾಯ-ಧರ್ಮಗಳನ್ನು। ಮಿಕ್ಕಿದಪರಾಧವಂ। ಮಾಯೆ ಮಾ ದೇವಿ ನೀಂ ಕ್ಷಮಿಸು ತಾಯೇ। ಕಾಯೆ ನಮ್ಮನ್ನು ನಿತ್ಯ। ವರದಾತೆ ಕಾಳಿಕೇ। ತಾಯೆ ಪಾಲಿಸು ನಮ್ಮ ಕೈ ಬಿಡಬೇಡ।।2।।

ಪರಮಾತ್ಮ ಪ್ರಿಯೆ ಸೋದರಿ **ರಾಗ: ಶ್ರೀ**

ಪರಮಾತ್ಮ ಪ್ರಿಯೆ ಸೋದರಿ ಗೌರಿ। ಪಾದಸೇವೆಯ ತೋರೆ ದೇವಿ ಗೌರಿ।।ಪ।। ಹೆಜ್ಜೆಗಳ ಮೇಲೆ ಹೆಜ್ಜೆಗಳನಿಕ್ಕುತ। ಕಾಲ್ಗೆಜ್ಜೆ ನಾದದಿ ಬರುವ ಗೌರಿ।।1।। ಕರಕಮಲದಿಂದ ವರಗಳ ಸುರಿಸುತ ನರಹರಿ ಪ್ರಿಯೆ ಸೋದರಿ ಗೌರಿ।।2।। ತನಗೆ ವಂದಿಸುವವರ ಮನದಲಿ ತಾನಿಂದು ಕನಕ ವೃಷ್ಟಿಯ ಕರೆವ ದೇವಿ ಗೌರಿ।।2।।

ಪರಶಿವ ಸತಿ ನಿನ್ನ **ರಾಗ: ಆನಂದಭೈರವಿ**

ಪರಶಿವ ಸತಿ ನಿನ್ನ। ಪಾದವ ನಂಬಿದೆ ಕರುಣದಿ ಕಾಪಾಡಮ್ಮ।।ಪ।। ಪರಿ ಪರಿ ವಿಧದಿ ನಿನ್ನ ಭಕುತರು ಪೊಗಳಿರಲು ಅರಿಯದೆ ನಾ ನಿನ್ನ। ಏನೆಂದು ಪೊಗಳಲಮ್ಮ।।ಅ.ಪ.।। ನೀನೀ ಸಮಯದಿ। ಮರೆತೆಯಾದರೆ ಎನ್ನ। ನಾನೀ ಜಗದಲಿ ಯಾರನು ಬೇಡಲಿ। ಏನಿದೂ ಈ ಮೌನ। ದೀನನ ಪೊರೆಯಲು। ಆನಂದ ಭೈರವಿಯೇ ಆದರ ತೋರಮ್ಮ।।1।। ಎಲ್ಲಾ ದುರಿತಗಳು ಗಿರಿಗಳಂತಿದ್ದರೂ। ಹುಲ್ಲಾಗುವುದು ನಿನ್ನ ಕರುಣೆಯ ಕಡಲೊಳು। ಕಲ್ಯಾಣಿಯೇ ಕರುಣಾ ಸಾಗರಿಯೇ। ಶಿವೆ ಉಲ್ಲಾಸಿಯೇ ಉಮೆ ನಿನ್ನ ನಂಬಿರುವೆನಮ್ಮ।।2।। ನಾಗೇಶ್ವರಿ ಎಂದು ನಮಿಸುವೆ ನಾ ತಾಯೇ। ಬಾಗೇಶ್ವರಿ ಮಾಯೆ। ಬಂದಿಂದು ಕೃಪೆ ತೋರೆ ಬಾಗೇಶ್ರೀ ತಾಯೇ। ಪಾರ್ವತಿಯೆ। ಸಕಲ ಲೋಕೇಶ್ವರಿ ನೀನು ನಮಗಿನ್ನು ಗತಿಯಮ್ಮ।।3।। ಅಂಜನಲೋಚನೆ ಅಂಬಿಕೆ ಶಿವೆಯೇ। ಕುಂಜರ ಮುಖಮಾತೆ ಮಂಗಳದಾತೆ। ಅಂಜುತ ಬಂದಿಹೆ ಆಶ್ರಯ ಬಯಸಿ। ರಂಜನಿಯೇ ಎನ್ನ ರಕ್ಷಿಸಬೇಕಮ್ಮ।।4।।

ಪಾಲಿಸೆಮ್ಮನು ಶಿವಕಾಮೇಶ್ವರಿ **ರಾಗ: ಆರಭಿ, ಆದಿತಾಳ**

ಪಾಲಿಸೆಮ್ಮನು ಶಿವಕಾಮೇಶ್ವರಿ। ತ್ರಿಭುವನ ಜನನಿ ಮೋಕ್ಷ ಪ್ರದಾಯಿನಿ।। ಮಾನಸಿ ಮಾಲಿನಿ ನೆನೆವೆ ನಿನ್ನನ್ನು ಎಂದೆಂದು ಭಕುತರ ಪಾಲಿಸು ತಾಯೆ।।ಪ।। ಅಂಬುಜವಾಣಿ ಬಿಡದೆ ನೀ ಸಲಹಮ್ಮ। ಅಂಬುಜಾಕ್ಷಿಯೆ ಜಗದ ರಕ್ಷಕಳೆ।। ಅಂಬಭವಾನಿ ಆದಿ ಪರಾಶಕ್ತಿ। ಅಂಬ ಭುವನೇಶ್ವರಿ ನೀ ದಯೆ ತೋರಮ್ಮ।।1।। ನಿಜಗುಣ ರೂಪಳೆ ನಿತ್ಯ ಕಲ್ಯಾಣಿ। ನೀರಜಾಕ್ಷಿಯೆ ಬಾರಮ್ಮ ತಾಯಿ।। ನಿಗಮಗೋಚರ ನಿತ್ಯ ನಿರುಪಮ ಸುಂದರಿ। ಕುಕ್ಕೆಸ್ವಾಮಿಯ ಮಾತೆ ಪಾರ್ವತಿ ತಾಯಿ।।2।।

ಪೆಟ್ಟಿ ನಿರೈಯ್ಯ ಪೂ ಕೊಣಂದು (ತಮಿಳು) **ರಾಗ: ಜುಂಜೋಟಿ**

ಪೆಟ್ಟಿ ನಿರೈಯ್ಯ ಪೂ ಕೊಣಂದು ಪೂಜಿಪ್ಪೇನಮ್ಮ ಉನ್ನೈ ಇಷ್ಟಮುಡನೆ ನಾಂಗಳ್‌ವಂದು।।ಪ।। ಫಲಪುಷ್ಪಂಗಳ್ ಕೊಂಡೊಂದು ಉನ್ನೈ ಅಷ್ಟೋತ್ತಿರ ಶೈವೇನ್। ಒರು ಕಷ್ಟಮುಂ ಇಲ್ಲಾಮಲ್ ಕಾರ್ಪದು ಉನ್ ಕಡಮೈ ಕರುಣಾಸಾಗರಿಯೆ।।ಅ.ಪ.।। ಮಲ್ಲಿಗೆ ಮುಲ್ಲೈ ಮರುಉಡನ್ ತಾಳೈ ಮಹಿಳುಂ ಪೂ ಪಾದರಿಯುಂ। ಅಳ್ಳಿಯ ರಾಶಿ ಕದಿರ್ ಪಚ್ಚಿತಂ ಉಳ್ಳ ಅಳಗುಳ್ಳ ಪಾರಿಜಾತಂ। ಸೊಕ್ಕರಿಡಾ ಪಕ್ವಮದಾಯ್ ಶಕ್ತಿಉನ್ನೈ ಭಕ್ತಿಯುಡನ್ ಪೂಜಿಪೆನಂಬಾ।।1।। ವಾಣಿ ಸರಸ್ವತಿ ವಂದೆನ್ನೈ ಆದರಿಪ್ಪಾಯ್ ವಾಚಾಮಗೋಚರಿಯೆ। ಶ್ರೀಕರಿಯೆ ಪ್ರಭಾಕರಿಯೆ ಶುಭಾಕರಿಯೆ ಕೃಪಾಕರಿಯೆ।।2।। ಪಕ್ವಮದಾಗವೆ ಪರಿಮಳ ಪೊಡಿಯಿನಾಲ್ ಲಕ್ಷಾರ್ಚನೆ ಸೈವೇನ್। ಅಕ್ಷಯ ಸಂಪತ್ತು ಅನುಗ್ರಹ ತಂದೆನ್ನೈ ಆದರಿತ್ತರುಳ್‌ವಾಯ್ಯೆ। ಏಕಾಕ್ಷರಿಯೆ ಪಂಚಾಕ್ಷರಿಯೆ ಷಡಾಕ್ಷರಿಯೆ ಕೃಪಾಕರಿಯೆ।।3।।

ಬುಟ್ಟಿ ತುಂಬ ಹೂವ ತಂದು (ಮೇಲಿನ ಕೃತಿಯ ಭಾವಾನುವಾದ) ರಾಗ: ಜುಂಜೋಟಿ

ಬುಟ್ಟಿ ತುಂಬ ಹೂವ ತಂದು ಪೂಜಿಪೆವಮ್ಮ ... ನಿನ್ನ ಇಷ್ಟದೊಡನೆ ನಾವು ಬಂದು॥ಪ॥ ಕದಳಿ ಕಂಬ, ತಳಿರು ತೋರಣ ಸುಗಂಧ ದ್ರವ್ಯಗಳೊಡನೇ। ಫಲ ಪುಷ್ಪಗಳ ತಂದು ನಿನಗೆ ಅಷ್ಟೋತ್ತರ ಗೈವೆ। ಒಂದು ಕಷ್ಟವು ಬರದಂತೆ ಕಾಯೆ ಕರುಣಾ ಸಾಗರಿಯೆ॥ಅ.ಪ॥ ಮಲ್ಲಿಗೆ ಜಾಜಿ ಮರುಗ ತಾಳೆಹೂ ಅರಳಿದ ಪಾದರಿಯು। ... ಕೇದಿಗೆ ಸಂಪಿಗೆ ಸುರಗಿಯೊಡನೆ ಸುಂದರ ಪಾರಿಜಾತದಿ। ... ಶೃಂಗರಿಸಿ ಶಕ್ತಿ ನಿನ್ನ ಭಕ್ತಿಯಲಿ ಪೂಜಿಪೆವು ಅಂಬಾ॥1॥ ಧರೆಯೊಳು ನಿನಗೆ ಎದುರ್ಯಾರೆ ನೀರೆ ಶುಭಕರ ಕಲ್ಯಾಣಿ। ನೀಬಂದು ಎಮ್ಮನು ಆದರಿಸು ಶ್ರೀ ನಿಮಿಷಾಂಬಾದೇವಿಯೆ। ಜಗದೀಶ್ವರಿಯೆ ಶಾಂಭವಿಯೆ ಶಂಕರಿಯೆ ಕೃಪಾಕರಿಯೆ॥2॥ ದಾಳಿಂಬೆ ದ್ರಾಕ್ಷಿ ನಾರಿಕೇಳ ನಿನಗೆ ಸಮರ್ಪಿಸಿ ಸಂಗೀತವ ಪಾಡಿ। ಸಾಲು ದೀಪವ ಹಚ್ಚಿ ಲಕ್ಷಾರ್ಚನೆ ಮಾಡುವೆವು ಅನುಗ್ರಹಿಸು ತಾಯೆ। ಏಕಾಕ್ಷರಿ ನೀ ಪಂಚಾಕ್ಷರಿ ನೀ ಷಡಾಕ್ಷರಿ ನೀ ಹ್ರೀಂ ಕಾರಿಣಿ ನೀ॥3॥

ಬನ್ನಿರಿ ಗೆಳೆಯರೆ ಘನ್ನ ಪುರಿಗ್ಹೋಗೋಣ ರಾಗ: ದುರ್ಗ

ಬನ್ನಿರಿ ಗೆಳೆಯರೆ ಘನ್ನ ಪುರಿಗ್ಹೋಗೋಣ। ಅಮ್ಮನ ನೋಡೋಣ ಬನ್ನಿರಿ ಅಮ್ಮನ ನೋಡಿದರೆ ಜನ್ಮ ಸಾರ್ಥಕವಹುದು ಅಮ್ಮನ ನೋಡೋಣ ಬನ್ನಿರಿ ಎಣ್ಣೆ ಸ್ನಾನವ ಮಾಡಿ ಬಣ್ಣದ ಮಡಿಯುಟ್ಟು ಚಿನ್ನದಾಭರಣ ಧರಿಸೋಣ ಅಮ್ಮನ ಪೂಜೆಗೆ ಅಣಿ ಮಾಡಿಕೊಳ್ಳುತ್ತ ಅಮ್ಮನ ನೆನೆಯುತ್ತಾ ಹೋಗೋಣ॥

ಪ್ರೇಮ ಚೂಪಿ ಪಾಲಿಂಚು

ಪ್ರೇಮ ಚೂಪಿ ಪಾಲಿಂಚು ಜನನಿ। ಪಾಮರಾಲು ನಿನೇಡು ಈ। ಪಾಮರಾಲು ನಿನೇಡು॥ಪ।. ಪೇದಲ ಸಾದಲ ಭೇದಮುಲನು ನೀವಾ ದರಮುಲತೋ। ಭಾವಿಂಚುನು। ಮಾಧವಿ ಶಂಕರಿ। ಯನಿ ನಿನು ವೇಡಿನ ವಾರಿಕೆ ಮಾರ್ಗಮು ಚೂಪುಚುನು॥1॥ ಗೊಪ್ಪದೈವಮನಿ ದಲಚಿನ ಭಕ್ತುಲ। ತಪ್ಪುಲ ವಪ್ಪುಗ ಚೇಯುಚುನೊ। ಎಪ್ಪುಡು ನಿನ್ನೇ ನಮ್ಮಿ ವಾರಿಕಿಗೊಪ್ಪದ ಸಂಪದಲಿಚ್ಚುಚುನು॥2॥ ಸುರಲು ಕಿನ್ನರಲು। ವರಮು ನಲಿ ಪುಡಿ। ಮನ ಮುನಂದು ನಿಲ ಚುಂಡಗನೊ। ವರಬ್ರಹ್ಮೇಶುನಿ। ವನಿತವು ನೀವನ್ನಿವ ಜನನೇತ್ರನಿನು ವೇಡಗನೊ॥3॥

ಬನಶಂಕರಿ ತಾಯೆ ಬಾರಮ್ಮ ರಾಗ: ಮಧ್ಯಮಾವತಿ, ಆದಿತಾಳ

ಬನಶಂಕರಿ ತಾಯೆ ಬಾರಮ್ಮ। ಭಕ್ತರ ಮನೆಯ ಭಾಗ್ಯದ ಲಕ್ಷ್ಮೀಯೇ ಬಾರಮ್ಮ॥ಪ॥ ಗೆಜ್ಜೆಯ ನಾದವ ಮಾಡುತ ನೀನು। ಹೆಜ್ಜೆಯ ಮೇಲೆ ಹೆಜ್ಜೆಯನಿಡುತ। ಶುಕ್ರವಾರದ ಪೂಜೆಯ ವೇಳೆಗೆ। ಭಕ್ತರ ಮನೆಯ ಭಾಗ್ಯ ಲಕ್ಷ್ಮೀಯೆ॥1॥ ಶಂಕು ಚಕ್ರ ಪದ್ಮವ ಪಿಡಿದು। ಸರ್ವಶಕ್ತಿ ಧಾರಿಣಿಯಾಗಿ। ಶೋಕಭಯ ನಿವಾರಿಣಿ ನೀನು। ಸರ್ವರಿಗೂ ಸದಾ ಅಭಯ ನೀಡಮ್ಮ॥2॥ ಹರಿದ್ರ ಕುಂಕುಮ ಬಳೆ ಬಿಚ್ಚೋಲೆ। ಕರಿಮಣಿ ಕನ್ನಡಿ ಕುಬುಸವನಿಟ್ಟು। ಬನಶಂಕರಿ ನಿನ್ನ ಗುಡಿಯನೆ ತುಂಬುವೆ। ಹರುಷದಿ ಕುಕ್ಕೆಸ್ವಾಮಿಯ ನೆನೆಯುತ ನಿನಗೆ॥3॥

ಬನಶಂಕರಿ ದೇವಿ ಶಿವಶಂಕರಿ ರಾಗ: ಶಹನ

ಬನಶಂಕರಿ ದೇವಿ ಶಿವಶಂಕರಿ ದೇವಿ। ಬಂಧ ವಿಮೋಚನಿ ಕರುಣಾಕರಿ ದೇವಿ॥ಪ॥ ಕಾಮಿತದಾಯಕಿ ಜಗದೀಶ್ವರಿ ದೇವಿ। ದುರ್ಗಾ ಪರಮೇಶ್ವರಿ ಅಭಯಂಕರಿ ದೇವಿ॥1॥ ಭಕ್ತರುದ್ಧಾರಳೆ ಅಸುರ ಭಯಂಕರಿ। ಭಾಮಿನಿ ವೈದೇಹಿ ಪ್ರಿಯ ಸಹೋದರಿ॥2॥ ಬಾಲ ಹನುಮನ ಜನನಿ ದೇವಿ ಮನೋಹರಿ। ಬೇಡುವೆ ನಿನ್ನನು ದೇವಿ ಬನಶಂಕರಿ॥3॥

ಬನ್ನಾರಿ ತಾಯಿಯೇ ನಮಸ್ಕಾರಂ (ತಮಿಳು) ರಾಗ : ಶ್ರೀರಾಗ

ಬನ್ನಾರಿ ತಾಯಿಯೇ ನಮಸ್ಕಾರಂ। ಆದಿಪರಾಶಕ್ತಿ ನಮಸ್ಕಾರಂ ॥ಪ॥ ಅಖಿಲಾಂಡೇಶ್ವರಿ ನಮಸ್ಕಾರಂ। ಅನ್ನಪೂರ್ಣೇಶ್ವರಿ ನಮಸ್ಕಾರಂ। ರಾಜರಾಜೇಶ್ವರಿ ನಮಸ್ಕಾರಂ। ಶ್ರೀರಾಜರಾಜೇಶ್ವರಿ ನಮಸ್ಕಾರಂ॥1॥ ವೇದರೂಪಿಣಿ ನಮಸ್ಕಾರಂ।

ವಿದ್ಯಾದಾಯಿನಿ ನಮಸ್ಕಾರಂ। ಬ್ರಹ್ಮಾದಿಪೂಜಿತೆ ನಮಸ್ಕಾರಂ। ಬ್ರಾಹ್ಮಿದೇವಿಯೇ ನಮಸ್ಕಾರಂ॥2॥ ಕುಮಾರ ಜನನಿಯೇ ನಮಸ್ಕಾರಂ। ಕೌಮಾರೀ ದೇವಿಯೇ ನಮಸ್ಕಾರಂ। ಮಹೇಶ ವಲ್ಲಭೆ ನಮಸ್ಕಾರಂ। ಮಹೇಶ್ವರಿ ದೇವಿಯೇ ನಮಸ್ಕಾರಂ॥3॥ ವಿಷ್ಣು ಸಹೋದರಿ ನಮಸ್ಕಾರಂ। ವೈಷ್ಣವಿ ದೇವಿಯೇ ನಮಸ್ಕಾರಂ। ವಾಣಿ ಸ್ವರೂಪಿಣಿ ನಮಸ್ಕಾರಂ। ವಾರಾಹಿ ದೇವಿಯೇ ನಮಸ್ಕಾರಂ॥4॥ ಇಕ್ಷು ಚಾಪಧರೆ ನಮಸ್ಕಾರಂ। ಇಂದ್ರಾಣಿ ದೇವಿಯೆ ನಮಸ್ಕಾರಂ। ಚಂದ್ರಕಲಾಧರೆ ನಮಸ್ಕಾರಂ। ಚಾಮುಂಡಿ ದೇವಿಯೆ ನಮಸ್ಕಾರಂ॥5॥ ಸರ್ವ ಶಕ್ತಿಯೆ ನಮಸ್ಕಾರಂ। ಸರ್ವಾಭೀಷ್ಟಳೆ ನಮಸ್ಕಾರಂ। ಷಟ್ಚಕ್ರ ಪೂಜಿತೆ ನಮಸ್ಕಾರಂ। ಶ್ರೀಚಕ್ರವಾಹಿನಿ ನಮಸ್ಕಾರಂ॥6॥

ಬಾರೆ ಭವಾನಿಯೇ — **ರಾಗ: ಸಾವೇರಿ**

ಬಾರೆ ಭವಾನಿಯೇ ಬೇಡಿಕೊಂಬುವೆ ನಿನ್ನ ನೀ ಬಾರೆ ಭವನಿಯೇ॥ಪ॥ ಅರಿಸಿನ ಕುಂಕುಮ ಹರುಷದಿಂ ಪೂಜಿಪೆ। ಸರಸಿಜಾಕ್ಷಿಯೇ ನಿನ್ನ ಹರುಷದಿಂ ಪೂಜಿಪೆ॥1॥ ಕರುಣಾದಿ ವರವನು ಕರೆದು ಪಾಲಿಸು ತಾಯೇ। ಶರಣಾಗತರನ್ನು ಪರಿಪಾಲಿಸು। ಪಾರ್ವತಿ ಬಾರೆ॥2॥ ದೇಶದೇಶದವರು ಭಕ್ತಿಯಿಂದ ಬರುವರು। ಕಾಶಿ ವಿಶ್ವೇಶ್ವರನ ಮಡದಿಯೇ ಪಾಲಿಸು ಬಾರೆ॥3॥

ಬಂದಾಳಮ್ಮ2 ಭವಾನಿಮಾತೇ — **ರಾಗ: ಆನಂದಭೈರವಿ, ಆದಿತಾಳ**

ಬಂದಾಳಮ್ಮ ಬಂದಾಳಮ್ಮ ಭವಾನಿಮಾತೇ । ಬಂದಾಳಮ್ಮ ಬಂದಾಳಮ್ಮ ಭಾಗ್ಯದೇವತೇ॥ಪ॥ ಬಂದಳಮ್ಮ ಬಾಗಿಲು ಸರಿಸಿ ನಿಲ್ಲಿರಮ್ಮ । ಬಂಧನ ಬಿಡಿಸಿ ಭಕುತರ ಕಾಯಲು ಬಂದಳಮ್ಮ॥ಅ.ಪ.॥ ಕಾಶೀ ಪೀತಾಂಬರವನುಟ್ಟು ಬಂದಳಮ್ಮ। ಕಡಗ ಕಂಕಣ ಕರಿಮಣಿ ಸಹಿತ ನಿಂದಿಹಳಮ್ಮ ॥ ಕಾಮಿತಾರ್ಥವನೀಯಲು ತಾಯಿ ಬರುವಳಮ್ಮ । ಏಕಚಿತ್ತದಿ ಧ್ಯಾನವ ಮಾಡಲು ಕಲಿಯಿರಮ್ಮ॥1॥ ಗೆಜ್ಜೆಯ ಕಾಲ ಘಲುಘಲುರೆನ್ನುತ ಬಂದಳಮ್ಮ । ಹರಿದ್ರಾಕುಂಕುಮ ಶೋಭಿತಳಾಗಿ ನಿಂದಿಹಳಮ್ಮ॥ ಒಂದೇಮನದಲಿ ಕೂಗಲು ದೇವಿ ಬರುವಳಮ್ಮ । ಇಷ್ಟಫಲಗಳ ಕೇಳಿಕೊಳ್ಳಿರಿ ಬನ್ನಿರಮ್ಮ ॥2॥ ಕಸ್ತೂರಿ ತಿಲಕವನಿಟ್ಟು ದೇವಿ ಬಂದಾಳಮ್ಮ । ಕೊರಳಲಿ ಕವಡೆ ಮಣಿಸರ ಹಾಕಿ ನಿಂದಿಹಳಮ್ಮ॥ ನಗುನಗುತಲಿ ನಲಿದಾಡುತ ದೇವಿ ಬಂದಾಳಮ್ಮ । ಅಭಯ ಹಸ್ತವ ನೀಡುತ ನಿಂದಿಹಳಮ್ಮ ॥3॥ ಮಿಂಚಿನಂದದಿ ಹೊಳೆಯುತಲೀಗ ಬಂದಾಳಮ್ಮ। ಮೂರುಲೋಕದೊಳೀಪರಿ ಚೆಲುವೆ ಇಲ್ಲವಮ್ಮ ॥ ಕನಕಮಂಗಳ ಗೌರೀದೇವಿ ಬರುವಳಮ್ಮ। ಮಾಂಗಲ್ಯ ಭಾಗ್ಯವ ಕೇಳಿಕೊಳ್ಳಿರಿ ಬನ್ನಿರಮ್ಮ ॥4॥ ಶುಕ್ರವಾರದ ಶುಭದಿನದಲ್ಲಿ ಬಂದಾಳಮ್ಮ । ಬಂದು ಪಡಿಯ ಮೇಲೆ ದೇವಿ ಕುಳಿತಿಹಳಮ್ಮ ॥ ಶ್ರಾವಣಮಾಸದ ವರಮಹಾಲಕ್ಷ್ಮಿ ಬರುವಳಮ್ಮ । ಹೂರಣದಾರತಿ ಮಾಡಿ ನಾವು ಧನ್ಯರಾಗೋಣ॥5॥

ಬಂದು ನಿಲ್ಲೌ ಕಣ್ಣಮುಂದೆ — **ರಾಗ: ಅಭೇರಿ**

ಬಂದು ನಿಲ್ಲೌ ಕಣ್ಣಮುಂದೆ। ಇಂದು ಶ್ರೀ ಎಲ್ಲಮ್ಮ ದೇವಿ॥ಪ॥ ಪಟ್ಟೆ ಕುಂಕುಮವನ್ನು ಹಚ್ಚಿ। ತಟ್ಟನೇ ಬಾರಮ್ಮ ಮೆಚ್ಚಿ॥1॥ ಝುಗಝುಗಿಪ ಜಗದಂಬೆ ವರದೆ। ಜಗುಲಿಯಲಿ ಬಾರಮ್ಮ ತ್ವರದೆ॥2॥ ಪರಶುರಾಮನ ಮಾತೆ ಬಾರೇ। ಪರಮ ಮಂಗಳವನ್ನು ತೋರೆ॥3॥ ಮೂಗುತಿಯ ಮುತ್ತೈದೆ ಬಾರೇ। ಯೋಗಿನೀ ವರ ಕೈಯ ತಾರೇ॥4॥ ಬೆಟ್ಟಾ ಸುರನಸುವ ಹೀರಿದಮ್ಮಾ ಬೆಟ್ಟದಲ್ಲಿರುವೇಕೆಯಮ್ಮಾ॥5॥

ಬಂದೇವು ನಿಮ್ಮ ಮಂದಿರಕೆ — **ರಾಗ: ಆನಂದಭೈರವಿ**

ಬಂದೇವು ನಿಮ್ಮ ಮಂದಿರಕೆ ನಮ್ಮ ಕುಂದನ್ನು ಕಡೆಗಣಿಸಿ ಕಾಪಾಡಬೇಕಮ್ಮ॥ಪ॥ ಸಂದರುಶನ ನೀಡಿ ಸಲಹು ನಮ್ಮಮ್ಮ ಸುಂದರಿ ಘನಪುರಿಯ ಕಾಮಾಕ್ಷಿಯಮ್ಮ॥ಅ.ಪ॥ ಬಡವರು ಎಂದೆನಿಸಿ ತಡಮಾಡಬೇಡಮ್ಮ ಒಡತಿ ಒಳ್ಳೆಯ ಕೋಪ ನಮಗೂ ಉಂಟಮ್ಮಾ। ತಡವಾದರೇನಮ್ಮ ಒಡತಿನೀನಿದ್ದೆ ಎಂದು ಒಡನೆ ಭಕ್ತರ ಕೂಡ

ಕರೆವೇನಮ್ಮಮ್ಮ ।।1।। ನಿನ್ನ ಶ್ರೀ ಪಾದಗಳ ಸೇವಕರು ಎಂದೆನಿಸಿ ನಿನ್ನ ಶ್ರೀದರುಶನವ ಪಡೆವಂತೆ ದಯಮಾಡು। ಉನ್ನತ ಮಹಿಮೆಯನು ಶ್ರೀಕಂಠದಿ ಹಾಡಿ ಉನ್ಮತ್ತರಾಗಿ ಮೈ ಮರೆವಂತೆ ಮಾಡಮ್ಮ ।।2।।

ಭುವನ ಸುಂದರಿ ನಿನ್ನ **ರಾಗ: ಶಿವರಂಜನಿ, ಛಾಪುತಾಳ**

ಭುವನ ಸುಂದರಿ ನಿನ್ನ ಭವನದಲಿ ನಿಂದಿಹೆನು। ಅವಿನಯವ ಮನ್ನಿಸುತ ಅವಲೋಕಿಸಮ್ಮ ।।ಪ।। ಕವನಗಳ ರಚಿಸುತಲಿ ಪಾಡಿ ಪೊಗಳುವೆನಮ್ಮ। ಕನಿಕರಿಸಿ ಎನ್ನಕಡೆ ಅವಲೋಕಿಸಮ್ಮ ।।ಅ.ಪ.।। ಶ್ರೀಚಕ್ರ ಮಂದಿರವ ಬಲಗೊಂಡು ಬರುವಾಗ। ಶ್ರೀಮಾತೆ ಎನ್ನಕಡೆ ನೋಡಬಾರದೆ ಅಮ್ಮ। ಶ್ರೀಚಕ್ರದಲಿ ಕುಳಿತು ಪೂಜೆಗೊಂಬುವ ಸಮಯ। ಶ್ರೀ ದೃಷ್ಟಿ ಎನ್ನಕಡೆ ಹರಿಸಬಾರದೆ ಅಮ್ಮ ।।1।। ಮಂಗಳಾರತಿ ಸಮಯ ಮಂಗಳದ ದೃಷ್ಟಿಯನು। ಕಂಗಳಲಿ ತೋರುತ್ತ ತಣಿಸಬಾರದೆ ಅಮ್ಮ। ಸಂಗೀತ ರಚನೆಗಳ ಶ್ರೀಕಂಠದಲಿ ಹಾಡೆ। ಮುಂಗೈಯ ಮುಡಿಗಿಟ್ಟು ಹರಸಬಾರದೆ ಅಮ್ಮ ।।2।।

ಭವಾನೀ2 ಭವತಾರಿಣಿ ದೇವಿ **ರಾಗ: ವಸಂತ**

ಭವಾನೀ ಭವಾನೀ ಭವತಾರಿಣಿ ದೇವಿ। ಭಾವನಾ ಸ್ವರೂಪೆ ಅಭಯ ಪ್ರದಾಯಿನಿ।। ದಯಾರೂಪೇ ಮಯಾದುಃಖ ವಿಮೋಚನೀ। ಜಯ ಜಯಾ ಜಯದುರ್ಗೆ ಜ್ಞಾನಗೇಯ ಸ್ವರೂಪಿಣಿ।। ಜಗನ್ಮಾತೇ ಜಾಗೃ ಸರ್ವಕಾಲ ವಿಭೇಧಿನೀ। ಜಗದ್ಧಾತ್ರೇ ಮಹಾತಾಂಡವ ಸಾಕ್ಷಿಯೇ।। ಮಹಾಮಾಯೇ ಮಹೋತಾಹೇ ಮಹಾಯೋಗೀಶ ಹೃದಯೇ। ಮಹಾಶಕ್ತ್ಯೇ ಮಹಾಲಕ್ಷ್ಮೀ ಮಾತೇ ಮಹಾಭವಾನಿ। ತ್ರಯಂಬಿಕೇ ಭಕ್ತಿ ಮುಕ್ತಿ ಪ್ರದಾಯಿನೀ। ಭುವನ ಮೋಹಿನಿ ವಸಂತವಲ್ಲಭ ರೂಪಿಣೀ ನಾರಾಯಣೀ।।

ಮಧುರೆ ಮೀನಾಕ್ಷಿಯೆ ಬಾರಮ್ಮ **ರಾಗ:ಆನಂದಭೈರವಿ, ಆದಿತಾಳ**

ಮಧುರೆ ಮೀನಾಕ್ಷಿಯೆ। ಬಾರಮ್ಮ ನಮ್ಮ ಸದನದೊಳು ನಿಂತು ಸಲಹಮ್ಮ ।।ಪ।। ಪದುಮ ನೇತ್ರೆಯೆ ನಿನ್ನ ಪದಯುಗ ಕೆರಗುವೆ। ಮದನ ವೈರಿಯ ರಾಣಿ। ಮುದದಿಂದ ಬಾರಮ್ಮ ।।ಅ.ಪ.।। ಹರಿಣಾಂಕ ವದನೆಯ ಹರಿವಾಣಿ ರೂಪಿಣಿ। ಹರಿಣಾಕ್ಷಿ ಸಿರಿಗೌರಿ। ಹರಿವೇಣಿಯೇ। ಹರಿಹರಾ ಬ್ರಹ್ಮ। ಅಮರ ವಂದಿತೆಯೆ। ಹರುಷದಿಂದಲಿ ಬಂದು ಹರಸಮ್ಮ ನೀ ಇಂದು।।1।। ದಾನವ ಹಾರಿಣಿ। ದನುಜ ಸಂಹಾರಿಣಿ। ದೀನರ ಮೊರೆ ಕೇಳಿ। ಪೊರೆಯಮ್ಮಾ। ಆನಂದ ಭೈರವಿ ರಾಗದಿ ಪಾಡುತ। ಆನಂದದಿಂದಲಿ ಆರುತಿ ಬೆಳಗುವೆ।।2।।

ಮಲ್ಲಿಗೆಹೂವಿನಂಥ ಮೃದುಲ **ರಾಗ: ಆನಂದಭೈರವಿ, ಮಿಶ್ರಛಾಪು**

ಮಲ್ಲಿಗೆಹೂವಿನಂಥ ಮೃದುಲ ಮನದವಳೆ। ಮಲ್ಲಿಗೆ ಮಾಲೆಯ ಮುಡಿಯಲಿ ಮುಡಿದವಳೆ।।ಪ।। ಮಲ್ಲೆ ಮಲ್ಲಿಗೆ ಕೇದಗೆ ಸಂಪಿಗೆಹೂವ ಸಲ್ಲಿಸಿ ನಿನ್ನಲಿ ವರಗಳ ಬೇಡುವೆ।।ಅ.ಪ।। ಕಾಮಕ್ರೋಧ ಲೋಭ ಮೋಹಾದಿ ಅರಿಗಳ। ಕಾಮನಜನನಿಯೆ ದೂರವಿರಿಸೌ ತಾಯೆ। ಸೋಮಶೇಖರನ ಪ್ರಿಯೆ ಭಾಮಿನಿಯೆ। ಶ್ಯಾಮಲೆ ಕೋಮಲೆ ನೀಡೆ ದೇವಿ ಸೌಭಾಗ್ಯವ।।1।।

ಮಾರಾರಿ ಸುಂದರಿ ಶೌರಿ **ರಾಗ: ಶ್ರೀ–ಆದಿತಾಳ**

ಮಾರಾರಿ ಸುಂದರಿ ಶೌರಿ ಸಹೋದರಿ ಬಾರದೆ ದಯ ನಿನಗೆ। ಯಾರಿಗಿನ್ನುಸುರಲಿ ಕಾರುಣ್ಯಾಮೃತಕರಿ ಕೋರುವೆ ವೈಭವಕರೀ ಶ್ರೀ ಗೌರಿ।।ಪ।। ಜನನಿಯ ಗರ್ಭದಿ ಜನಿಸುತೆ ಜನಸ್ತುತೆ ಸ್ತನಪಾನವ ಗೈದನೇ। ಕೆನೆಹಾಲು ಮೆಲ್ಲುತೆ ಸನಿಹಾದೆ ನಿಲ್ಲುತೆ ಮನೆಯೊಳಾಡಿದನೆ ಮಲಗಿದನೇ।।1।। ಸುಮಶರ ಬಾಣದಿ ಶ್ರಮಿಸುತೆ ನಮಿಸುತೆ ಕ್ರಿಮಿಯಂಗೆ ಕಂಗೆಟ್ಟನೇ। ರಮಣೀಯ ಕಂಗಳಿಂ ಸಮದಿಶ ಮಂಗಳಂ ಗಮನಿಸದಡಿಯಿಟ್ಟೆನೇ ಮತಿಗೆಟ್ಟೆನೇ।।2।। ಮತಿ ಸ್ಮ ೃತಿತಪ್ಪಿರೆ

ಶೃತಿ ಧೃತಿಗುಂದಿರೆ ಗತಿರೀತಿ ಕಾಣದಿರೆ। ಶೃತಿ ವಾಕ್ಯ ಬಾರದು ಚತುರತೆ ಸಾಲದು ಪತಿತನ ಯಮದೂತ ಪ್ರಾರ್ಥಿಸುವನೇ॥3॥

ಮೇಲುಕೋ ಲಲಿತಾಂಬ **ರಾಗ:ಭೌಳಿ, ಏಕತಾಳ**

ಮೇಲುಕೋ ಲಲಿತಾಂಬ ಮೇಲುಕೊ ಕನ್ಯಕಾಂಬ। ಮೇಲುಕೋ ಅಮ್ಮ ಮೇಲುಕೋ॥ಪ॥ ನೀ ಭಕ್ತುಲು ನೀ ದಾಸುಲು ನೀ ಪಾದಸೇವಕುಲು। ವಚ್ಚಿ ಉನ್ನಾರಮ್ಮ ಮೇಲುಕೋ..ತಲ್ಲಿ..॥1॥ ರಾಜರಾಜೇಶ್ವರಿ ರಾಜೀವ ಲೋಚನೀ। ರಂಜನೀ ತಂಜನೀ ಮೇಲುಕೋ ತಲ್ಲಿ॥2॥ ವಾರಾಹೀ ಕೌಮಾರಿ ಮಹೇಂದ್ರಿ ಚಾಮುಂಡಿ। ವೈಷ್ಣವೀ ಬ್ರಾಹ್ಮೀ ಮೇಲುಕೋ ಮಹೇಶ್ವರೀ॥3॥

ಮಂಗಳ ಚರಣೇ ಮಂಗಳ **ರಾಗ: ಜುಂಜೋಟಿ**

ಮಂಗಳ ಚರಣೇ ಮಂಗಳ ವದನೇ। ಮಂಗಳದಾಯಿನಿ ಕಾಮಾಕ್ಷೀ॥ಪ॥ ಗುರುಗುಹ ಜನನೀ ಗುರುಕಲ್ಯಾಣಂ। ಕುಂಜರ ಜನನೀ ಕಾಮಾಕ್ಷೀ॥ಅ.ಪ॥ ಕಷ್ಟನಿವಾರಿಣಿ ಇಷ್ಟವಿದಾಯಿನಿ। ದುಷ್ಟವಿನಾಶಿನಿ ಕಾಮಾಕ್ಷೀ। ಹಿಮಗಿರಿ ತನಯೇ। ಮಮಹೃದಿನಿಲಯೇ। ಸಮಜನ ಸದಯೇ ಕಾಮಾಕ್ಷೀ॥1॥ ಭಕ್ತ ಸುಮಾನಸ ತಾಪವಿನಾಶಿನಿ। ಮಂಗಳದಾಯಿನೀ ಕಾಮಾಕ್ಷೀ। ಕೇನೋಪನಿಷತ್ ವಾಸಿನಿ ನಿತ್ಯೇ। ಮಂಗಳದಾಯಿನಿ ಕಾಮಾಕ್ಷಿ॥2॥ ಗೃಹನುತೇ ಚರಣೇ ಗೃಹಸುಖದಾಯಿನಿ। ನತಸುಖದಾಯಿನಿ ಕಾಮಾಕ್ಷೀ। ಹರಿದ್ರಾಮಂಡಲ ವಾಸಿನಿ ನಿತ್ಯೆ। ಮಂಗಳದಾಯಿನಿ ಕಾಮಾಕ್ಷೀ॥3॥

ರಾಜರಾಜೇಶ್ವರಿ ರಜತ ಗಿರೀಶ್ವರೀ **ರಾಗ: ಮಧ್ಯಮಾವತಿ, ಆದಿತಾಳ**

ರಾಜರಾಜೇಶ್ವರಿ ರಜತ ಗಿರೀಶ್ವರೀ। ರಾಜೀವಲೋಚನೆ ರಕ್ಷಿಸಮ್ಮ। ತ್ರಿಕರಣದಿಂದಲಿ ನಿನ್ನ ಶರಣ ಜನರು ನಿನ್ನ ಸ್ಮರಣೆಯ ಮಾಡುತ್ತಲಿರ್ಪರೆ॥ಪ॥ ಪ್ರಾತಃಕಾಲದಿ ಎದ್ದು ಮಿಂದು ಮಡಿಯನುಟ್ಟು ಪ್ರಾರ್ಥಿಸುತ ಪೂಜೆ ಮಾಡುವೆ। ಸುರಗಿ ಮಲ್ಲಿಗೆ ಜಾಜಿ ಪುಷ್ಪಗಳ ಅರ್ಚಿಸಿ। ಭಕ್ಷ್ಯ ಭೋಜ್ಯ ಫಲ ನೈವೇದ್ಯ ಮಾಡುವೆ॥1॥ ಸೋಮೇಶ್ವರನ ಸತಿ ಸೌಂದರ್ಯವತಿ ನೀನು। ಸೌಭಾಗ್ಯ ಲಕ್ಷ್ಮಿಯಾಗಿ ಒಲಿದು ಬಂದೆ। ಸರ್ವರಿಗೂ ನೀನು ಸಕಲವೂ ಕೊಡುವಳೆ। ಕುಕ್ಕೆ ಸ್ವಾಮಿಯ ಮಾತೆ ನೀ ಸೇವೆ ಸ್ವೀಕರಿಸಮ್ಮ॥2॥

ರಾಜ ರಾಜೇಶ್ವರಿ

ರಾಜ ರಾಜೇಶ್ವರಿ ರಜತ ಗಿರೀಶ್ವರಿ। ರಾಕೇಂದು ವದನೆಯೆ ಪರಮೇಶ್ವರಿ॥ಪ॥ ಮೂರ್ಜಗವನು ಪರಿ। ಪಾಲಿಪ ಈಶ್ವರಿ ಶ್ರೀ ಗಜವದನಮಾತೆ ಮಹೇಶ್ವರಿ ॥ಅ.ಪ.॥ ರಂಗನ ಸೋದರಿ ತುಂಗ ಮಹೇಶ್ವರಿ। ಅಂಗಜ ವೈರಿಯ ಹೃದಯೇಶ್ವರಿ। ಮಂಗಳ ಗೌರಿಯೆ ಶೃಂಗಾರ ಶೇಖರಿ। ಸಂಗೀತ ಲೋಲೆ ಶ್ರೀ ಗಂಗಾ ಪರಮೇಶ್ವರಿ॥1॥ ಪಂಕಜ ವದನೆಯೆ। ಕುಂಕುಮಾಂಕಿತೆಯೆ। ಶಂಕಿಸದೇ ಪೊರೆ। ಶಾಂಕರಿಯೆ। ಪಂಕೇರುಹಾಕ್ಷಿಯೆ ಪಾಲಿಸು ಮಹನೀಯೇ। ಕಿಂಕರರಾ ಪೊರೆ ಶಂಕರ ರಾಣಿಯೆ॥2॥

ರಾತ್ರಿಯ ವೇಳೆ ತಿರುಗುವಿಯಲ್ಲ **ರಾಗ: ಹಿಂದೋಳ**

ರಾತ್ರಿಯ ವೇಳೆ ತಿರುಗುವಿಯಲ್ಲ ಭಯನಿನಗಿಲ್ಲವೆ ಹೇಳಮ್ಮ। ರಾತ್ರಿಯ ವೇಳೆ ಧಾತ್ರಿಯ ಕಾಯುವ ಕಾಯಕ ನನ್ನದು ಕೇಳಪ್ಪ॥1॥ ಇರುಳಿನ ಸಮಯದಿ ಹರಳು ಮುಳ್ಳುಗಳ ತುಳಿದರೆ ನಿನ್ನ ಗತಿ ಏನಮ್ಮ। ಹೆರಳೊಳು ಚಂದ್ರ ಬೆಳಗಿಹುದಪ್ಪ ರವಿಶಶಿ ಕಂಗಳು ಎನಗಪ್ಪ॥2॥ ದುಷ್ಟರು ಬಂದರೆ ಕಷ್ಟವು ಬರುವುದು ಎಷ್ಟೆಂದರು ಸ್ತ್ರೀ ನೀನಮ್ಮ। ದುಷ್ಟ ರಾಕ್ಷಸ ಕೋಟಿಯ ಕೊಂದಿಹೆ ದುಷ್ಟರೂ ಎನ್ನಯ ಸುತರಪ್ಪ॥3॥ ಸಿಂಹವು ಘರ್ಜಿಸಿ ಎದುರಿಗೆ ಬಂದರೆ ಅಂಜಿಕೊಂಡು ನೀ ಓಡುವೆಯಮ್ಮ। ಸಿಂಹವಾಹಿನಿಯು ನಾನಾಗಿರುವೆನು ಸಿಂಹವು ಎನಗೆ ಮಗುವಪ್ಪ॥4॥ ಹಿಮ

ಛಳಿ ಮಳೆಗೆ ರಕ್ಷಣೆ ನಿನಗೆ ಕೊಡುವರು ಯಾರು ಕೇಳಮ್ಮ। ಹಿಮಗಿರಿರಾಜನ ಸುತೆಯಾದ ಎನಗೆ ಹಿಮಗಿಮ ಲೆಖ್ಖವು ಇಲ್ಲಪ್ಪ॥5॥ ಬೇಸರ ಬಂದರೆ ಬೇಸರ ಕಳೆಯಲು ಏನು ಉಪಾಯವ ಮಾಡುವಿಯಮ್ಮ। ಬೇಸರ ಬಂದರೆ ಶ್ರೀಕಂಠದಲ್ಲಿ ಸಾಸಿರ ನಾಮವ ಪಾಡುವೆನಪ್ಪ॥6॥ ದಿನಮಣಿಮೂಡಲು ನಿನ್ನಾಗಮನವು ಜನನಿ ಎಲ್ಲಿಗೆ ಹೇಳಮ್ಮ। ಘನಪುರಿ ಕ್ಷೇತ್ರದ ಗುಡಿಯಲ್ಲಿರುವ ಘನತರ ಚಕ್ರವೆ ನೆಲೆಯಪ್ಪ॥7॥

ಲಾಲಿಸೇ ಮಾದೇವಿ ಜಯ **ರಾಗ:ಕಲ್ಯಾಣಿ**

ಲಾಲಿಸೇ ಮಾದೇವಿ ಜಯ ಚಾಮುಂಡಿ ಲಾಲಿಸೇ। ಲಾಲಿಸೇ ನೀ ಎನ್ನ ಲಾವಣ್ಯಾಂಬುಧಿ ಜಗಜ್ವಾಲಾ ನೀಲವ ತಾಳ್ದ ಕೋಲಾಹಲ ಪ್ರಿಯೆ॥ಪ॥ ಜಲಜ ಪಾದದಿ ದಿವ್ಯ ಗಲುಗೆಜ್ಜೆ ಮಂಟಿಗೆ ಪಿಲ್ಲಿ ಹೊಳೆಯುವ ಎಳೆಮಾವು। ತಳಿರು ಪೋಲುವ ಬೆರಳು ಅಂದ ನಲಿವ ಯುಗಗಳೆ ಝುಂಗೆ ಜಲಗುಳ್ಳೆಯಂತೆ ಜಾನು ಧಳಧಳಿಸುವತೊಡೆ ನಲಿವೊ ಕೌಮಾರಿಗೌರಿ॥1॥ ಮಂಡೆಯೊಳ್ ಮಕುಟ ಕರ್ಣಕುಂಡಲ ಮೂಗುತಿಯು ಗಂಡಯುಗಳ ಚೆಲ್ವ ಚೆಂಡ ನಾಸಿಕ ಅಂಬ ರುಂಡಮಾಲೆಯು ಭೈರುಂಡನ ದಟ್ಟ ಹಾಸಿ ಖಂಡಿಸಿ ಮಹಿಷಾಸುರನ ಮಂಡೆಯ ಸೀಳಿದ ಮಾತೆ॥2॥ ಹರಿದ್ರಾ ಕುಂಕುಮ ಗಂಧ ಹರುಶದಿಂ ಶೋಭಿತಳಾಗಿ ಮರುಗಮಲ್ಲಿಗೆ ದಂಡೆ ಅಂದಶಿರದಿಂದು ರವಿನುಟ್ಟು ಶೃಂಗಾರ ಪಾನ್ ಬೊಟ್ಟು ಹರಿದ್ರಾ ಭೂತದಿ ದಿವ್ಯ ಧನ ಧಾನ್ಯ ಶ್ರೀನಯನೆ॥3॥ ಭೇರಿ ಮದ್ದಲೆ ಶಂಖ ತಾಳ ತಂಬೂರಿವೀಣೆ ಮ್ಯಾಳ ಮೃದಂಗ ನಾಟ್ಯ ಸುಳೆರಾರತಿಯಿಂದ ಅಂಬ ವೇಳೆ ತಪ್ಪದೆ ನಿರುತ ಬಹಳ ಪೂಜೇನೇ ಗೊಂಬ ಪಾಲಿಪ ಬಿರುದು ಪೊತ್ತ ನೀಲಕಂಠನ ರಾಣಿ॥4॥ ಶೂಲ ಡಮರುಗ ಚಕ್ರವಾಳು ದರಬಾರು ಶಂಖ ಜ್ವಾಲಾಗ್ನಿ ಕರಪತ್ರ ಜ್ವಲಿಪೋ ಕುಲಿಶಲಾರಿ ಅಂಬ ವೇಳೆ ತಪ್ಪದೆ ನಿರುತ ಬಹಳ ಪೂಜೇನೇ ಗೊಂಬ ಪಾಲಿಪ ಬಿರುದು ಪೊತ್ತ ರಾಣಿ॥5॥ ದಿಟ್ಟ ಮಹಿಷಾಸುರನ ಮೆಟ್ಟಿ ಪಾದದಿಂದೊತ್ತಿ ಬೆಟ್ಟದೊಳಗೆ ನೆಲಸಿ ಶ್ರೇಷ್ಠಳೆಂದೆನಿಸಿದೆ ಅಂಬ ಕೃಷ್ಣ ರಾಜೇಂದ್ರನ ಮನದಿಷ್ಟ ದೇವತೆ ಎನಿಸಿ ಕಷ್ಟವ ಪರಿಹರಿಸಿ ಇಷ್ಟವ ಕೊಡುವ ದಾತೆ॥6॥ ಬಿಂಕದಿಂದ ಕರ ಕಂಕಣಾಂಕಿತಳಾಗಿ ಓಂಕಾರಿ ಚತುರ್ವೇದಿ ಓಂಕಾರಿ ಝೇಂಕಾರಿ ಅಂಬ ಹ್ರೀಂಕಾರಿ ಶ್ರೀಪ್ರಸನ್ನ ವೆಂಕಟ ವಿಠಲನ್ನ ಮಂಗಳ ಸಹೋದರಿ ಪಂಕಜ ನಯನಾಂಬ॥7॥

ವಾಸವಾಂಬ ನಾ ನಿನ್ನ **ರಾಗ: ಶ್ರೀ**

ವಾಸವಾಂಬ ನಾ ನಿನ್ನ ಪೂಜಿಸುವೆ ಎನ್ನ ಮೇಲೆ ಮನಸು ಇರಬಾರದೇ ಅಂಬಾ ನಿನ್ನ ಮನಸು ಇರಬಾರದೇ ಅಂಬಾ॥ಪ॥ ಅರಿಶಿನ ಕುಂಕುಮ ಪೂಜಿಸಿ ನಿನಗೆ। ಅರೆದು ಕೇಸರಿ ಗಂಧ ಪರಿಮಳವ ಲೇಪಿಸಿ॥ ಹಸನಾದ ಫಲಪುಷ್ಪ ಅರ್ಪಿಸಿ ನಿನಗೆ। ತಾಂಬೂಲ ಇತ್ತು ಆರತಿ ಎತ್ತಿ॥1॥ ನೀರಜದಳನೇತ್ರೆ ಕೋರಿದ ವರವೀವೆ। ನಮ್ಮಯ ಕಷ್ಟವ ನಿಮಿಷದಿ ಪರಿಹರಿಸೈ। ಬಂಗಾರದ ಮಂಟಪದಿ ಬಂದು ನೀ ಕುಳಿತು। ಸರಸದಿ ಎಮ್ಮನು ಸಲಹು ನೀ ತಾಯೇ॥2॥ ಮಾಡಿದ ಅಪರಾಧಗಳ ಮರೆತು ನೀ ಪೊರೆಯುವೆ। ನೀರೆ ನಿನ್ನಯ ಪಾದ ಸೇವೆ ಮಾಡುವೆನು। ಪಂಚಾಮೃತ, ಗಂಧೋದಕ, ಅಕ್ಷತೆ, ಪುಷ್ಪ। ಚಂದದ ಧೂಪ, ದೀಪ, ನೈವೇದ್ಯ ನಿವೇದಿಸಿ॥3॥ ಜಗಕೆ ಜನನಿಯು ನೀನಾಗಿರುವೆ। ಹಗಲಿರುಳು ನಿನ್ನ ಪೂಜಿಪೆನು। ಸರ್ವಾಭರಣದಿ ಅಲಂಕೃತಳಾಗಿ। ಕಲಶದಿ ನೆಲೆಸಿ ಹರಸು ನೀ ತಾಯೇ॥4॥

ವಾಸವಾಂಬೆಯ ವಿಶ್ವರೂಪವ ಕಂಡೆ **ರಾಗ: ತಿಲಂಗ್**

ವಾಸವಾಂಬೆಯ ವಿಶ್ವರೂಪವ ಕಂಡೆ। ಮನದೊಳು ಅನುಪಮ ಶಾಂತಿಯ ಪಡೆದೆ॥ಪ॥ ರತ್ನಾಭರಣದಿಂದ ಶೋಭಿಸುತ್ತಿರುವ। ರತ್ನಖಚಿತಮಯ ಮುಕುಟ ಧರಿಸಿಹ। ಪ್ರೇಮಾನುರಾಗದ ದೃಷ್ಟಿಯ ಬೀರುವ। ಸದ್ಭಕ್ತರ ಮನ ತಣಿಸುತಲಿರುವ॥1॥ ತ್ಯಾಗದ ತಾಳ್ಮೆಯ ಸಿರಿಯನು ಕಂಡೆ। ಜ್ಞಾನಸ್ವರೂಪಿಣಿ ಗಿರಿಜೆಯ ಕಂಡೆ। ಎಲ್ಲ ದೇವತೆಯ ರೂಪವ ಕಂಡೆ। ಭಕ್ತಿಭಾವದಲಿ ನಮಿಸುತ ನಿಂದೆ॥2॥ ಭಕ್ತರ ದಿನಮಣಿ ಬಾಳಿನ ಕಣ್ಮಣಿ। ಲೋಕವ ಬೆಳಗುವ ಮಂಗಳದಾಯಿನಿ। ಚೈತನ್ಯದಾಸನ ಹೃದಯನಿವಾಸಿನಿ। ಸತ್ಯಶಾಂತಿ ಸುಖ ಅಮೃತವರ್ಷಿಣಿ॥3॥

ವಾಸವಿ ಜಗದೀಶ್ವರಿ ಕರುಣಾಕರಿ **ರಾಗ: ಕಲ್ಯಾಣಿ, ಏಕತಾಳ**

ವಾಸವಿ ಜಗದೀಶ್ವರಿ ಕರುಣಾಕರಿ ದಯಾಕರಿ।।ಪ।। ಪಾಹಿಮಾಂ ಅಮರೇಶ್ವರಿ ಪೆನುಗೊಂಡ ಪುರಾಧೀಶ್ವರಿ।।ಅ.ಪ.।। ಧರ್ಮವರ್ಧಿನಿ ಸತ್ಯ ಸಂಧಿನಿ ಭಕ್ತ ಜನ ಪರಿಪಾಲಿನಿ। ಪಾಹಿಮಾಂ ಸುಖದಾಯಿನಿ ಅಭಿಮಾನಿನಿ ಕಾತ್ಯಾಯಿನಿ।।1।। ಅರಿಭಯಂಕರಿ ಮದನಸುಂದರಿ ವೈಶ್ಯಕುಲ ಹೃದಯೇಶ್ವರಿ। ರಕ್ಷಮಾಂ ಸುಮನೋಹರಿ ಜಯ ಕನ್ನಿಕಾ ಪರಮೇಶ್ವರಿ।।2।। ವಿಶ್ವವಂದಿತೆ ವಿಶ್ವರಂಜಿತೆ ವಿಶ್ವಮಾತೆ ಸುಪೂಜಿತೆ। ಶಾರದೇನುತೆ ಜಗದ್ವಿಖ್ಯಾತೆ ಸುವ್ರತೆ ಗುಣಶೋಭಿತೆ।।3।।

ಶ್ರೀಕಾಳಿ ದುರ್ಗಾಂಬೆ ಪರಮೇಶ್ವರಿಯೇ **ರಾಗ: ಹಿಂದೋಳ, ರೂಪಕತಾಳ**

ಶ್ರೀಕಾಳಿ ದುರ್ಗಾಂಬೆ ಪರಮೇಶ್ವರಿಯೇ ತಾಯೆ। ಅಭಿಷೇಕ ಪ್ರಿಯಳೇ ನೀ ರತ್ನಾಭರಣಾಲಂಕೃತಳೆ। ಅನುಪಮ ಸುಂದರಿಯೇ ನೀ ಅಖಿಲಾಂಡೇಶ್ವರಿಯೆ। ಕಾಯೆ ಶ್ರೀ ಕಾಳಿಯೆ।।ಪ।। ಚಂಡಿಕಾಳಿಕೆಯಾಗಿ ನೀ ಉಗ್ರ ರೂಪದಿ ನೀನು। ರುಂಡಮಾಲೆಯ ಧರಿಸಿಹ ಸಿಂಹವಾಹಿನಿಯೆ। ಚಂಡ ಮುಂಡಾದಿಗಳನ್ನು ಖಂಡಿಸಿ ಗೆಲಿದಂಥ। ಚಂಡಿಕಾದೇವಿ ಚಾಮುಂಡೇಶ್ವರಿ ನೀ ತಾಯೆ।।1।। ದುರ್ಗೆಯು ನೀನಾಗಿಕೈಯಲಿ ಖಡ್ಗವ ಪಿಡಿದು। ದುಷ್ಟರ ಶಿಕ್ಷಿಸಿ ನೀನು ಶಿಷ್ಟರ ರಕ್ಷಿಸುವೆ। ರಕ್ತಬೀಜನ ಕೊಂದು ಶಕ್ತಿಸ್ವರೂಪಿಣಿಯೆ ತಾಯೆ। ಕುಕ್ಕೆಯ ಸ್ವಾಮಿಯ ಮಾತೆ ದಯವನು ತೋರಿ ನೀ ಸಲಹಮ್ಮ।।2।।

ಶ್ರೀಚಕ್ರ ತೇರನು ಏರಿದ **ರಾಗ: ರಂಜನಿ, ಆದಿತಾಳ**

ಶ್ರೀಚಕ್ರ ತೇರನು। ಏರಿದ ಜನನಿ। ಶ್ರೀ ಕಾಮಾಕ್ಷಿ ಘನಪುರಿ ವಾಸಿನಿ।।ಶ್ರೀ।। ಶ್ರೀ ಚಕ್ರೇಶ್ವರಿ। ಆಶ್ರಿತ ರಕ್ಷಕಿ। ಶ್ರೀಕಂಠದಯಿತೇ। ಅಂಬಾಭವಾನಿ।।ಶ್ರೀ।।ಅ.ಪ।। ಹೃದಯ ಚಕ್ರದೊಳು। ಮುದದಿ ನೆಲೆಸುತ। ಮಧುರಗಾನದ। ಸವಿಯನು ಕೇಳಿಸು। ಪದುಮ ಪಾದಗಳ। ಸೇವೆಯ ಕರುಣಿಸು। ಸದಮಲ ಭಕ್ತಿಯ ಗಾನವ ಪಾಡಿಸು।।1।। ನಿನ್ನಯ ಪದಕಾಂತಿ। ಎನ್ನನು ರಂಜಿಸುತ। ಧನ್ಯನೆಂದೆನಿಸಲಿ। ನನ್ನೀ ಬಾಳಲಿ। ಚಿನ್ಮಯ ಮೂರುತಿ ಶ್ರೀಕಾಮಾಕ್ಷಿ। ಎನ್ನನುದ್ಧರಿಸಮ್ಮ। ಕರುಣದಿ ವೀಕ್ಷಿಸಿ।।2।।

ಶ್ರಿತಜನ ಪೋಷಿಣಿ **ರಾಗ: ಹಿಂದೋಳ, ಆದಿತಾಳ**

ಶ್ರಿತಜನ ಪೋಷಿಣಿ ಶ್ರೀಲಲಿತೇ। ಚಿನ್ಮಯ ರೂಪಿಣಿ ಸೌಭಾಗ್ಯದಾಯಿನಿ।।ಪ।। ಶಿವಕಾಮೇಶ್ವರಿ ತ್ರಿಭುವನ ಜನನಿ। ಶ್ರೀಕಂಠೇಶ್ವರಿ ಶಾಂತ ಮನೋಹರಿ। ಸಕಲ ಕಲಾಮಯೀ ಜ್ಞಾನ ಪ್ರದಾಯಿನಿ। ಶಿವಶಕ್ತಿ ಶಾಂಭವಿ ಶಂಕರಿ ಶುಭಕರಿ।।1।। ಕುಸುಮ ಕೋಮಲೆ ಕುಂಕುಮಾಂಕಿತಳೆ। ಪಂಕಜದಳ ನೇತ್ರೆ ಪಾವನ ಚರಿತಳೆ। ಸಾನುರಾಗದಿ ಎನ್ನ ಮನದಿಷ್ಟ ಸಲಿಸಮ್ಮ। ಕುಕ್ಕೆ ಸ್ವಾಮಿಯ ಮಾತೆ ನಿನ್ನಡಿಗಳಿಗೆರಗುವೆ।।2।।

ಶ್ರೀದೇವಿ ಮಾತೆ ಕನ್ಯಾಕುಮಾರಿ **ರಾಗ: ಕಲಾವತಿ**

ಶ್ರೀದೇವಿ ಮಾತೆ ಕನ್ಯಾಕುಮಾರಿ। ನೀನೆಂಥ ತ್ಯಾಗಿನಿಯು ಮಹೇಶ್ವರೀ।।ಪ।। ಶೃಂಗಾರ ಲಲಿತಾಂಗಿ ರೂಪರಾಶಿಯಮೋಹಿನಿ। ತ್ರಿಮೂರ್ತಿಗಳ ಮನಸೆಳೆದ ರಾಜರಾಜೇಶ್ವರಿ। ಬ್ರಹ್ಮ ಸೃಷ್ಟಿಯ ರೂಪಿಣೀ। ವಿಷ್ಣುಮನದಾ ಮೋಹಿನೀ। ಪರಶಿವನ ಪ್ರಿಯಶಂಕರೀ। ರಾಜರಾಜೇಶ್ವರಿ।।1।। ಮಾಂಗಲ್ಯಧಾರಣೆಯ ಸಂಭ್ರಮದಿ ನಿಂತಾಗಷ ಬಾಣಾಸುರನ ವಧೆ ಆಗಬೇಕೆಂದೂ। ಲೋಕಕಲ್ಯಾಣವ ಬಯಸಿ ನಾರದರು। ಯುಕ್ತಿಯಲಿ ಮುಹೂರ್ತವೆ ಮೀರುವಂತೆಸೆಗೆ।।2।। ಆ ನಿನ್ನ ತ್ಯಾಗವೇ ನಿನ್ನ ಕೀರ್ತಿಯ ಗುಟ್ಟು। ಲೋಕದಲಿ ಪುನಃ ಶಾಂತಿಯ ಹುಟ್ಟು। ನೀನಿಂದು ಪರಶಿವನ ದಾರಿ ನೋಡುತಿಹೆ। ಜನುಮ ಜನುಮಗಳಲು ಶ್ರೀರಾಣಿಯಾಗಿರಲು।।3।।

ಶ್ರೀಮಾತೆ ನವಶಕ್ತಿ ರೂಪಿಣಿ **ರಾಗ: ಕಾನಡ, ಆದಿ**

ಶ್ರೀಮಾತೆ ನವಶಕ್ತಿ ರೂಪಿಣಿ ಶ್ರೀಲಲಿತೆ ಮಾತೃಕಾಸ್ವರೂಪಿಣಿ।।ಪ।। ಕದಂಬವನವಾಸಿನಿ ಕಾಮೇಶ್ವರ ಪ್ರಣಯಿನಿ।

ಸದಮಲ ಚಿಂತಾಮಣಿ ಗೃಹ ಮಧ್ಯ ನಿವಾಸಿನಿ।।ಅ.ಪ।। ವಿಶ್ವಾದಿ ಜಗದ್ಭರಿತೆ ಅಮೃತಾದಿ ಮಹಾಶಕ್ತಿ ಸೇವಿತೆ। ಅಶ್ವ ರೂಢಾಸಂಸೇವಿತೆ ದಂಡಿನಿಮಂತ್ರಿಣಿ ಪೂಜಿತೆ। ವಿಶ್ವಾಸಿಭಕ್ತ ಪರಿವೃತೆ ಜ್ವಾಲಾಮಾಲಿನಿ ಸಂಪೂಜಿತೆ। ಈಶ್ವರಿ ಪರಮೇಶ್ವರಿ ಶ್ರೀಚಕ್ರರಥಾರೂಢೆ।।1।। ಚಂದ್ರರವಿಲೋಚನ ಸುತ ಮನ್ಮಥ ಪೂಜಿತೆ। ಇಂದ್ರಾಣಿ ಅಮರನುತೆ ಲೋಪಾಮುದ್ರಾರ್ಚಿತೆ। ಚಂದ್ರಕುಬೇರ ಸಂಸ್ತುತೆ ಮನು ಅಗಸ್ತ್ಯ ದೂರ್ವಾಸನುತೆ। ಚಂದ್ರಕಲಾಧರೆ ರಮಾವಾಣಿ ಸದಾರ್ಚಿತೆ।।2।। ಚಂಡ ಮುಂಡ ದೈತ್ಯಾದಿ ಭಂಜನಿ ಯೋಗಿನಿ। ಭಂಡ ದೈತ್ಯ ಶಿರಚ್ಛೇದ ನಿಪುಣೆ ಸಂಹಾರಿಣಿ। ಶುಂಭನಿಶುಂಭ ಮಹಿಷಾಸುರ ದೋರ್ವಿರ್ಯ ನಿಗ್ರಹಿಣಿ। ಅಂಬ ಅಸಮಬಲಶಾಲಿನಿ ದೇವೀ ಮೋಕ್ಷ ಪ್ರದಾಯಿನಿ।।3।।

ಶ್ರೀ ಮಾತೆಯ ಶ್ರೀ ಚರಣ **ರಾಗ: ಶ್ರೀ**

ಶ್ರೀ ಮಾತೆಯ ಶ್ರೀಚರಣ। ನಮೋ ನಮೋ ಎಂಬೆನು। ಶ್ರೀದೇವಿಯ ದಿವ್ಯಾತ್ಮಕೆ ಶರಣಾಗತನಾದೆನು।।ಪ।। ಭವಕಾರಿಣಿ ಶುಭಕಾರಿಣಿ ಆಗಿ ಜಗಕೆ ಬನ್ನಿರಿ। ಶುದ್ಧಾತ್ಮರಿಗಭಯ ವಾಣಿಯಲ್ಲಿ ಕರೆಯಕೊಟ್ಟಿರಿ।।1।। ನಿಮ್ಮ ವಾಣಿ ದಿವ್ಯಾಮೃತ ಮನುಜ ಹೃದಯ ತುಂಬಲಿ। ನಿಮ್ಮ ನಾಮ ಪುಣ್ಯಗೀತೆ ದಿವ್ಯತೆಯನು ತೋರಲಿ।।2।। ನಿಮ್ಮ ಪಾದಧೂಳಿಯಮಗೆ ರಕ್ಷೆಯನು ನೀಡಲಿ। ನಿಮ್ಮ ಕೃಪಾದೃಷ್ಟಿ ನಮಗೆ ತತ್ವಶಕ್ತಿ ತುಂಬಲಿ।।3।।

ಶ್ರೀ ವಾಸವಾಂಬಾ ಸದಾ **ರಾಗ: ಅಭೇರಿ**

ಶ್ರೀ ವಾಸವಾಂಬಾ ಸದಾ ಪೊರೆ ಸದಾ ಸೇವೆ ನೀಡೆ ರಮಣೀ ಶಕ್ತಿಯೆ।।ಪ।। ಸಾರಸಾಕ್ಷಿ ನಿನ್ನ ಕರೆವೆ ಪ್ರಸನ್ನಳಾಗೆ ತಾಯೆ ನೀ। ಕಮಲವಾಸಿನಿ ಪೀಠಕೆ ನಾ ಶಿರವ ಬಾಗಿ ಬೇಡುವೆ।।1।। ಬಾರೆ ತಾಯೆ ನಿನ್ನ ಭಜಿಪೆ ಬೇಗ ಕರುಣೆ ತೋರಿಸೆ। ವರವನಿತ್ತು ಸಲಹು ಎಮ್ಮ ಸುಂದರಾಂಗಿ ದಯೆ ತೋರಮ್ಮ।।3।। ಶ್ರೀ ಜಗದಂಬಾ ಪುಣ್ಯಚರಿತೆ ಹ್ರೀಂಕಾರ ರೂಪಿಣೀ ಪಾಲಿಸೈ। ಅಖಿಲಾಂಡ ಜನನೀ ಆದಿಕಾರಿಣಿ ನಿತ್ಯರಂಜನಿ ಅಭೀಷ್ಟಪ್ರದೆ।।3।।

ಶ್ರೀಶೈಲ ವಿಹಾರಿಣಿ **ರಾಗ: ಶುಂಭಪಂತುವರಾಳಿ-ಆದಿ**

ಶ್ರೀಶೈಲ ವಿಹಾರಿಣಿ ಶ್ರೀ ಶೈಲಜೆ।।ಪ।। ಶ್ರೀಶೈಲನಾಥಜಾಯೆ। ಶ್ರೀ ಶೈಲನಿವಾಸಿನಿ ಮಾಯೆ।।ಅ.ಪ.।। ಆದಿ ಶಂಕರ ಕರಾರ್ಚಿತ। ಪಾದಪದ್ಮಯುಗಳ ಭ್ರಮರೆ। ಸದಾಶಿವ ಭಾಮಿನಿ। ಮದಾಲಸೆ ವಾಮಾಂಗಿನಿ।।1।। ಗಜಮುಖ ಸ್ಕಂದರ ಜನನಿ। ನಿಜಸುತ ಹರ್ಷದಾಯಿನಿ। ಭಜಿಸುವ ಮನ ನೀಡೇ ದೇವಿ। ಕರುಣೆ ಗಜಚರ್ಮಾಂಬರನ ರಾಣಿ।।2।।

ಸುಮನಸ ರಂಜಿನಿ ಮಂಗಳ **ರಾಗ:ರಂಜನಿ**

ಸುಮನಸ ರಂಜಿನಿ। ಮಂಗಳ ರೂಪಿಣಿ ಭಕ್ತಿ ಪ್ರದಾಯಿನಿ। ಆನಂದರೂಪಿಣಿ ಶ್ರೀದೇವಿ।।ಪ।। ಮಂಜುಳಭಾಷಿಣಿ ರಂಜಿತ ಮೋಹಿನಿ। ಮಾಯಾದೀಶ್ವರಿ ಮಾಮವ ಶಂಕರಿ।।ಅ.ಪ।। ಪದ್ಮ ವಿಲಾಸಿನಿ ನಿತ್ಯ ನಿರಂಜಿನಿ। ಶಾಮಲ ಸುಂದರಿ ಸರಸಿಜ ನೇತ್ರೆ। ಚಂದ್ರ ಕಳಾಧರಿ ಶಾಂತದಯಾಮಯೀ। ಮುಕ್ತಿ ಸ್ವರೂಪಿಣಿ ಸುಮನಸ ರಂಜಿನಿ।।1।।

ಸುಂದರ ರೂಪಿಣಿ ತಾಯೇ **ರಾಗ: ಅಭೇರಿ**

ಸುಂದರ ರೂಪಿಣಿ ತಾಯೇ ನಿನ್ನ ಮೋಹನ ರೂಪಕ್ಕೆ ಮರುಳಾದೆವು ತಾಯೇ।।ಪ।। ಪಕ್ವವಾದ ಫಲಗಳ ಅರ್ಪಿಪೆವು ನಿನಗೆ ಆಶೀರ್ವದಿಸು ತಾಯೇ।।ಅ.ಪ.।। ಕೃಷ್ಣ ಶಿಲಾಕೃತಿ ತಾಯೇ ನಿನ್ನ ಎಷ್ಟೆಂದು ಪೊಗಳುವೆವು ತಾಯೇ। ದೀನರಕ್ಷಕಳೆ, ದಯವ ನೀ ತೋರಿ, ದೈನ್ಯದಿ ಕರುಣಿಸು ತಾಯೇ।।1।। ಶುಕ್ರವಾರದ ಶುಭದಿನದಂದು ಪರಿಪರಿ ಪುಷ್ಪದಿ ಪೂಜೆಯ ಮಾಡಿ। ಪದವನು ಪಾಡಿ ರಕ್ಷಿಸೆಂದು ಆರತಿ ಬೆಳಗುವೆವು ತಾಯೇ।।2।। ಮೊರೆಯನು ಕೇಳುತಾಯೇ, ಮರುಕವ ತೋರು ತಾಯೇ। ಮಹಾಮಾಯೆಯ ಸ್ಮರಣೆಯಮಾಡಿ, ಮಂಗಳವ ಕೋರಿ ನಮಿಸುವೆವು ತಾಯೇ।।3।।

ಕಂದರ ಪಾಲಿಸೆ ಬಿಂಬೋದರಿ, ಶರಣು ಬಂದಿಹೆವು ರಾಜೇಶ್ವರಿ। ಮೂಜಗದೀಶ್ವರಿ ಎಮಗೇ ಒಲಿದು ಪ್ರಸನ್ನಳಾಗೆ ವಾಸವಾಂಬಾ।।4।।

ಸೌಂದರ್ಯ ದುರ್ಗಾ ವಾ ಅಮ್ಮಾ **ರಾಗ: ಮಧ್ಯಮಾವತಿ, ಆದಿತಾಳ**

